KAS 27/08/2024

**ಈ ಪ್ರಶ್ನೆಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

ಪ್ರಶ್ನೆಪತ್ರಿಕೆ ವರ್ಷನ್ ಕೋಡ್

# B

# 2024

## ಪ್ರಶ್ನೆ ಪುಸ್ತಿಕೆ

## ಪತ್ರಿಕೆ—I

**ವಿಷಯ ಸಂಕೇತ : 578**

SHIKARAT.COM

1095698

**ಗರಿಷ್ಠ ಸಮಯ : 2 ಗಂಟೆಗಳು** **ಗರಿಷ್ಠ ಅಂಕಗಳು : 200**

### ಸೂಚನೆಗಳು

| ನೋಂದಣಿ ಸಂಖ್ಯೆ | | | | | | | | |
|---|---|---|---|---|---|---|---|---|
| 2 | 4 | 0 | 1 | 0 | 8 | 7 | 8 | 2 |

ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿ ಕಂಡುಬಂದಲ್ಲಿ

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿ ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
2. ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. **ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿ ಹಾಗೂ ನಿಮಗೆ ನೀಡಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯು ಒಂದೇ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ, ಒ.ಎಂ.ಆರ್. ಉತ್ತರ ಹಾಳೆಯಲ್ಲಿ ತಿಳಿಸಿರುವ ಅದೇ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಸಂವೀಕ್ಷಕರಿಂದ ಪಡೆದುಕೊಳ್ಳತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪ್ರಶ್ನೆ ಪತ್ರಿಕೆಯ ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲಿಯೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪತ್ರಿಕೆಯಲ್ಲಿ ಬೇರೆ ಎಲ್ಲಿಯೂ ಏನನ್ನೂ ಬರೆಯಬಾರದು.
6. ಈ ಪ್ರಶ್ನೆಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಆಯ್ಕೆಗಳನ್ನು ಒಳಗೊಂಡಿರುತ್ತದೆ. ನೀಡಿರುವ ಆಯ್ಕೆಗಳಲ್ಲಿ ಒಂದು ಸರಿಯಾದ ಉತ್ತರವನ್ನು ಅತ್ಯುತ್ತಮವೆನಿಸುವ ಉತ್ತರವನ್ನು ಗುರುತು ಮಾಡಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಿ. ಪ್ರತಿ ಪ್ರಶ್ನೆಗೆ ನೀವು ಕೇವಲ **'ಒಂದು ಉತ್ತರವನ್ನು ಮಾತ್ರ'** ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ (ಗುರುತು) ಮಾಡಿದಲ್ಲಿ ಆ ಉತ್ತರಗಳನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
7. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಗಳಲ್ಲಿರುತ್ತವೆ. ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿ ಪ್ರಶ್ನೆಗಳನ್ನು ಸಹ ನೋಡಿಕೊಂಡು, ಪ್ರಶ್ನೆಯನ್ನು ಅರ್ಥೈಸಿಕೊಳ್ಳುವುದು.
8. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ **ಕಪ್ಪು ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ** ಗುರುತು ಮಾಡಬೇಕು.
9. ಅಭ್ಯರ್ಥಿಯು ತಮ್ಮ **personalized** ಒ.ಎಂ.ಆರ್. **ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿ ಹಾಗೂ ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸ ಕಂಡುಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸಿರುತ್ತಾರೆ ಎಂಬುದರ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
10. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ **ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
11. ಅಭ್ಯರ್ಥಿಯು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದಲ್ಲಿ **ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
12. ಅಭ್ಯರ್ಥಿಯು Non-personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, **ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
13. ನಾಮಿನಲ್ ರೋಲ್ **(ಹಾಜರಾತಿ ಹಾಳೆ)**ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು. **ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
14. ಅಭ್ಯರ್ಥಿಯು ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ
15. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ಯಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
16. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಓಂಪಡೆದ ಕಾರ್ಬನ್ ರಹಿತ ಒ.ಎಂ.ಆರ್. ಉತ್ತರ ಹಾಳೆಯ (candidate copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
17. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವುದೇ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
18. **ತಪ್ಪು ಉತ್ತರಗಳಿಗೆ ವಿಧಿಸಲಾಗುವ ದಂಡ :**
    **ಅಭ್ಯರ್ಥಿಯಿಂದ ತಪ್ಪು ಗುರುತು ಮಾಡಲ್ಪಟ್ಟ ಉತ್ತರಕ್ಕೆ ದಂಡವನ್ನು ವಿಧಿಸಲಾಗುವುದು.**
    (i) ಪ್ರತಿ ಪ್ರಶ್ನೆಗೆ ಉತ್ತರಕ್ಕಾಗಿ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಪ್ರತಿ ಪ್ರಶ್ನೆಗೆ ಅಭ್ಯರ್ಥಿಯು ತಪ್ಪು ಉತ್ತರ ನೀಡಿದಲ್ಲಿ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ ¼ **(0·25)** ರಷ್ಟು ಅಂಕಗಳನ್ನು ದಂಡದ ರೂಪದಲ್ಲಿ ಕಳೆಯಲಾಗುವುದು.
    (ii) ಅಭ್ಯರ್ಥಿಯು ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರವನ್ನು ನೀಡಿದ್ದಲ್ಲಿ, ಅದರಲ್ಲಿ ಒಂದು ಉತ್ತರವು ಸರಿಯಾಗಿದ್ದರೂ ಸಹ ಅದನ್ನು **ತಪ್ಪು ಉತ್ತರ** ಎಂದು ಪರಿಗಣಿಸಲಾಗುವುದು. ಅಲ್ಲದೆ, ಮೇಲೆ ತಿಳಿಸಿದಂತೆಯೇ ಆ ಪ್ರಶ್ನೆಗೆ ದಂಡವನ್ನು ವಿಧಿಸಲಾಗುವುದು.
    (iii) ಅಭ್ಯರ್ಥಿಯು ಯಾವುದೇ ಪ್ರಶ್ನೆಗೆ ಉತ್ತರಿಸದೆ ಖಾಲಿ ಬಿಟ್ಟಲ್ಲಿ, ಅಂದರೆ ಉತ್ತರವನ್ನು ನೀಡದಿದ್ದಲ್ಲಿ, ಆ ಪ್ರಶ್ನೆಗೆ ಯಾವುದೇ **ದಂಡವನ್ನು ವಿಧಿಸಲಾಗುವುದಿಲ್ಲ.**

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣದ ಒಳಗೆ ತರುವುದನ್ನು ನಿಷೇಧಿಸಲಾಗಿದೆ.**

**Note:** *English version of the instructions is printed on the back cover of this booklet.*

**SEAL**

SHIKARAT.COM

**1.** ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ರಾಸ್ ಸಮುದ್ರ ಮತ್ತು ವೆಡ್ಡೆಲ್ ಸಮುದ್ರ ಅಂಟಾರ್ಟಿಕ್ ಪ್ರದೇಶದ ಭಾಗವಾಗಿದೆ.

B. ರಾಸ್ ಸಮುದ್ರ ಮತ್ತು ವೆಡ್ಡೆಲ್ ಸಮುದ್ರ ಆರ್ಕ್‌ಟಿಕ್ ಪ್ರದೇಶದ ಭಾಗವಾಗಿದೆ.

C. ಲಿಂಕಾನ್ ಸಮುದ್ರ ಆರ್ಕ್‌ಟಿಕ್ ಪ್ರದೇಶದ ಭಾಗವಾಗಿದೆ.

D. ಬೆಲ್ಲಿಂಗ್‌ಶಾಹೌಸೆನ್ ಸಮುದ್ರವು ಅಂಟಾರ್ಟಿಕ್ ಪ್ರದೇಶದ ಭಾಗವಾಗಿದೆ.

(1) B ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, C ಮತ್ತು D ಮಾತ್ರ

**2.** ಭೂ ಕಂಪನಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಭೂಮಿಯ ಮೇಲ್ಮೈಯಿಂದ 1000ಕಿ.ಮೀ ವರೆಗೆ ಭೂಮಿಯ ಕೊನೆಯ ಭಾಗವನ್ನು ಸೂಚಿಸುವಂಥ ಶಿಲಾಗೋಳದಲ್ಲಿ ಎಲ್ಲಾ ಸ್ವಾಭಾವಿಕ ಭೂಕಂಪನಗಳು ಸಂಭವಿಸುತ್ತವೆ.

B. ದ್ವಿತೀಯಕ ಭೂಕಂಪನಗಳ ತರಂಗಗಳು (S waves) ಘನದ್ರವ್ಯದ ಮೂಲಕ ಮಾತ್ರ ಚಲಿಸುವುದು ಅದರ ಗುಣಧರ್ಮವಾದ್ದರಿಂದ ಭೂಮಿಯ ಅಂತರ್‌ಭಾಗವನ್ನು ಅಧ್ಯಯನ ಮಾಡುವುದರಲ್ಲಿ ಸಹಾಯಕವಾಗುತ್ತವೆ.

C. ಮೇಲ್ಮೈ ತರಂಗಗಳು ಘನಕಾಯ ತರಂಗಗಳಿಗಿಂತ ಹೆಚ್ಚು ನಾಶಕಾರಕವಾಗಿವೆ.

D. ಭೂಕಂಪನಗಳ ಪರಿಮಾಣ ಮಾಪಕವನ್ನು ರಿಕ್ಟರ್ ಮಾಪಕವೆಂದು ಕರೆಯಲಾಗುತ್ತದೆ ಮತ್ತು ಭೂಕಂಪನದ ತೀವ್ರತೆಯನ್ನು ಮರ್ಕ್ಯಾಲಿ ಮಾಪಕವೆಂದು ಕರೆಯಲಾಗುತ್ತದೆ.

ಈ ಕೆಳಗೆ ನೀಡಲಾದ ಆಯ್ಕೆಯಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

**3.** ಈ ಕೆಳಗಿನ ಯಾವ ಘಟ್ಟಗಳು ಮಧ್ಯ ಹಿಮಾಲಯ/ಕೆಳ ಹಿಮಾಲಯಗಳಲ್ಲಿವೆ?

A. ಬನಿಹಲ್ ಘಟ್ಟ

B. ಪಿರ್ ಪನ್ಜಾಲ್ ಘಟ್ಟ

C. ಸಿಂನ್ಥಾನ್ ಘಟ್ಟ

D. ರೋಹ್‌ತಾಂಗ್ ಘಟ್ಟ

E. ಗೋಲಾಭರ್ ಘಟ್ಟ

(1) ಒಂದು ಹೇಳಿಕೆ ಮಾತ್ರ ಸರಿ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ನಾಲ್ಕು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲವೂ ಸರಿಯಾಗಿವೆ

SHIKARAT.COM

**4.** ಸರಿಯಾದ ಹೇಳಿಕೆಯನ್ನು/ಹೇಳಿಕೆಗಳನ್ನು ಗುರುತಿಸಿ :

A. ಭಾರತವನ್ನು ಹತ್ತು ಜೈವ ಭೂ ವಲಯಗಳಾಗಿ ಮತ್ತು 36 ಜೈವಿಕ ಪ್ರಾಂತಗಳಾಗಿ ವಿಭಾಗಿಸಲಾಗಿದೆ.

B. ಪ್ರದೇಶದ ನಿಬಂಧನೆಗಳಿಗನುಸಾರವಾಗಿ, ಸುಂದರ್‌ಬನ್ಸ್ ಜೈವಗೋಳ ಮೀಸಲು ಪ್ರದೇಶವು ಗರಿಷ್ಠ ಪ್ರದೇಶವನ್ನು ಹೊಂದಿದೆ.

C. ವಿಶೇಷ ಬಣ್ಣದ ಹಾರ್ನ್‌ಬಿಲ್ ಹಕ್ಕಿ ಮತ್ತು ಸಣ್ಣ ಸಸ್ತನಿ ಪ್ರಾಣಿಗಳು ಅಗಸ್ತ್ಯಾಮಲೈ ಜೈವಗೋಳ ಮೀಸಲು ಅರಣ್ಯದಲ್ಲಿ ಕಂಡುಬರುವ ಮುಖ್ಯವಾದ ಪ್ರಾಣಿ ಸಂಕುಲಗಳಾಗಿವೆ.

D. ಭಾರತದ ಆನೆಗಳ ಹಿಂಭಾಗದ ಆಕಾರವು ಆಕಾರದಲ್ಲಿ ಉಬ್ಬು ಮೈಯನ್ನು ಹೊಂದಿದರೆ, ಇದಕ್ಕೆ ಪ್ರತಿಯಾಗಿ, ಆಫ್ರಿಕಾದ ಆನೆಗಳಲ್ಲಿ ಅದು ಆಕಾರದಲ್ಲಿ ಒಳಬಾಗಿನ ಆಕಾರವನ್ನು ಹೊಂದಿವೆ.

ಈ ಕೆಳಗೆ ನೀಡಲಾದ ಆಯ್ಕೆಯಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

**5.** ಪಟ್ಟಿ—*I*ನ್ನು ಪಟ್ಟಿ—*II* ರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| ಪಟ್ಟಿ—*I*<br>ಖನಿಜ/<br>ಸಂಪನ್ಮೂಲಗಳು | ಪಟ್ಟಿ—*II*<br>ಗಣಿಗಾರಿಕೆ/<br>ಉತ್ಪಾದನಾ ಸ್ಥಳ |
|---|---|
| A. ಕಬ್ಬಿಣದ ಅದಿರು | *(i)* ಪನ್ನಾ ಜಿಲ್ಲೆ |
| B. ವಜ್ರ | *(ii)* ಜಾರಿಯಾ |
| C. ಕಲ್ಲಿದ್ದಲು | *(iii)* ಬಾಬಾ ಬುಡನ್ ಗಿರಿ |
| D. ಜಿಯೋಥರ್ಮಲ್ | *(iv)* ಪುಗಾ ಕಣಿವೆ |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(iii)* | *(i)* | *(ii)* | *(iv)* |
| (2) | *(i)* | *(iii)* | *(ii)* | *(iv)* |
| (3) | *(iii)* | *(ii)* | *(iv)* | *(i)* |
| (4) | *(iv)* | *(iii)* | *(ii)* | *(i)* |

**6.** ಈ ಕೆಳಕಂಡವುಗಳಲ್ಲಿ ಯಾವ ಹೇಳಿಕೆ ಸರಿಯಲ್ಲ?

(1) ಅಲೋಹೀಯ ಖನಿಜಗಳು ಸ್ವಾಭಾವಿಕವಾಗಿ ಅಜೈವಿಕ ಅಥವಾ ಜೈವಿಕವಾದವುಗಳಾಗಿವೆ.

(2) ಆಂಧ್ರಪ್ರದೇಶವು ಮೊನಾಜೈಟ್ ಮತ್ತು ಥೋರಿಯಂನ ಸಮೃದ್ಧಿ ನಿಕ್ಷೇಪಗಳನ್ನು ಹೊಂದಿದೆ.

(3) ಒಡಿಸ್ಸಾದಲ್ಲಿರುವ ಪ್ರಮುಖ ಮ್ಯಾಂಗನೀಸ್ ಗಣಿಗಳು ಕೋರಾಪುಟ್, ಬೊನಾಯಿ ಮತ್ತು ಬೊಲಂಗೀರ್‌ಗಳಾಗಿವೆ.

(4) ನೆಲ್ಲೂರು ಜಿಲ್ಲೆಯು ಅತ್ಯುತ್ತಮ ಗುಣಮಟ್ಟದ ಮೈಕಾ (Mica) ವನ್ನು ಉತ್ಪಾದಿಸುತ್ತದೆ.

SHIKARAT.COM

**7.** ಪಟ್ಟಿ—*I*ನ್ನು ಪಟ್ಟಿ—*II* ರೊಂದಿಗೆ ಹೊಂದಿಸಿ ಮತ್ತು ಈ ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆಯ್ಕೆಮಾಡಿ :

| ಪಟ್ಟಿ—*I* | ಪಟ್ಟಿ—*II* |
|---|---|
| **ಅರಣ್ಯದ ವಿಧಗಳು** | **ಪ್ರಮುಖ ಮರಗಳು** |
| A. ಉಷ್ಣವಲಯ ನಿತ್ಯ ಹರಿದ್ವರ್ಣ | *(i)* ನೀಮ್ |
| B. ಅರೆ ನಿತ್ಯ ಹರಿದ್ವರ್ಣ | *(ii)* ಸೆಡಾರ್ |
| C. ಉಷ್ಣವಲಯ ಸ್ವಾಭಾವಿಕವಾಗಿ ಉದುರುವ ಮರಗಳ ಎಲೆಗಳು | *(iii)* ರೋಸ್‌ವುಡ್ |
| D. ಕೋನಿಫರಸ್ ಮರಗಳು | *(iv)* ಡಿಯೋಡರ್ |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(iv)* | *(i)* | *(ii)* | *(iii)* |
| (2) | *(iii)* | *(ii)* | *(i)* | *(iv)* |
| (3) | *(ii)* | *(iii)* | *(i)* | *(iv)* |
| (4) | *(iii)* | *(iv)* | *(ii)* | *(i)* |

**8.** ನರ್ಮದಾ ನದಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಯು ಸರಿಯಲ್ಲ?

(1) ನರ್ಮದಾ ನದಿಯು ಅಮರಕಂಟಕ್ ಬೆಟ್ಟಗಳಲ್ಲಿ ಹುಟ್ಟಿ ಪೂರ್ವದಿಕ್ಕಿಗೆ ಹರಿಯುತ್ತದೆ

(2) ನರ್ಮದಾ ನದಿಯು ಜಬಲ್‌ಪುರ ಸಮೀಪ ಆಳವಾದ ಮಾರ್ಗಗಳ ಮೂಲಕ ಹರಿಯುತ್ತದೆ

(3) ನರ್ಮದಾ ನದಿಯ ಜಲಾನಯನ ಪ್ರದೇಶವು ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಹರಡಿಕೊಂಡಿದೆ

(4) ನರ್ಮದಾ ನದಿಯ ಉಪನದಿಗಳು ಚಿಕ್ಕದಾಗಿದ್ದು, ಬಹುಮಟ್ಟಿಗೆ ನೇರ ದಿಕ್ಕಿನಲ್ಲಿ ಮುಖ್ಯನದಿಗೆ ಸೇರುತ್ತವೆ

**9.** ಪಟ್ಟಿ—*I*ನ್ನು ಪಟ್ಟಿ—*II* ರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| ಪಟ್ಟಿ—*I* | ಪಟ್ಟಿ—*II* |
|---|---|
| **ಪರ್ವತ ಶ್ರೇಣಿ** | **ಪ್ರಮುಖ ಸಾಲು** |
| A. ಶಿವಾಲಿಕಗಳು | *(i)* ಪೀರ್ ಪಂಜಲ್ ಮತ್ತು ಮಹಾಭಾರತ |
| B. ಕಿರಿಯ ಹಿಮಾಲಯ ಪರ್ವತಗಳು | *(ii)* ಧವಳಗಿರಿ ಮತ್ತು ಮಕಾಲು |
| C. ದೊಡ್ಡ ಹಿಮಾಲಯ ಪರ್ವತಗಳು | *(iii)* ಡಾಫ್ಲಾ ಮತ್ತು ಮಿರಿ |
| D. ಹಿಮಾಲಯ ಪರ್ವತದಾಚೆ | *(iv)* ಕಾರಕೋರಂ ಮತ್ತು ಲಡಾಖ್ |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(ii)* | *(iii)* | *(iv)* | *(i)* |
| (2) | *(i)* | *(ii)* | *(iii)* | *(iv)* |
| (3) | *(iii)* | *(i)* | *(ii)* | *(iv)* |
| (4) | *(iv)* | *(iii)* | *(ii)* | *(i)* |

SHIKARAT.COM

**10.** ಕರ್ನಾಟಕದ ಭೂವಿಜ್ಞಾನಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಕರ್ನಾಟಕವು ಭಾರತೀಯ ಶಿಲಾಪ್ರದೇಶದ ಐದು ಪ್ರಮುಖ ಆರ್ಕಿಅನ್ ಕ್ರೇಟಾನ್‌ಗಳಲ್ಲಿ ಒಂದಾಗಿದೆ.

B. ಕರ್ನಾಟಕದ ಭೌಗೋಳಿಕ ಸರಹದ್ದನ್ನು ಮೀರಿಯೂ ಸಹ ಧಾರವಾಡ ಕ್ರೇಟಾನ್ ವಿಸ್ತರಿಸಿದೆ.

C. ಪಶ್ಚಿಮದ ಮತ್ತು ಪೂರ್ವದ ಧಾರವಾಡ ಕ್ರೇಟಾನ್ ನಡುವಿನ ಸರಹದ್ದನ್ನು ಕ್ಲೋಸ್‌ಪಿಟ್ ಗ್ರಾನೈಟ್ ಗುರುತು ಮಾಡುತ್ತವೆ.

SHIKARAT.COM

D. ಕಾಲಡ್ಗಿ (Kaladgi) ತಗ್ಗು ಪ್ರದೇಶವು ಪ್ರೀಟರೋಜೋಯಿಕ್ (protero-zoic) ಸೆಡಿಮೆಂಟರಿ ಶಿಲಾ ರಚನಾ ಪ್ರವರ್ಗಕ್ಕೆ ಸೇರುತ್ತವೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

**11.** ಶಿಲ್ಲಾಂಗ್ ಈ ಕೆಳಗಿನ ಯಾವ ಬೆಟ್ಟದಲ್ಲಿ ನೆಲೆಗೊಂಡಿದೆ?

(1) ಗಾರೋ ಬೆಟ್ಟಗಳು

(2) ನಾಗಾ ಬೆಟ್ಟಗಳು

(3) ಮಿಕಿರ್ ಬೆಟ್ಟಗಳು

(4) ಖಾಸಿ ಬೆಟ್ಟಗಳು

SHIKARAT.COM

**12.** ಕರ್ನಾಟಕದ ಸಾರಿಗೆ ಸಂಕೀರ್ಣ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಹೊಂದಿಸಿ ಬರೆಯರಿ :

| ಅಭಿವೃದ್ಧಿ | ವರ್ಷ |
|---|---|
| A. ನೈಋತ್ಯ ರೈಲ್ವೆ ವಲಯ, ಹುಬ್ಬಳ್ಳಿ | *(i)* 1951 |
| B. ಒಂದು ಪ್ರಮುಖ ಬಂದರಾಗಿ ಹೊಸ ಮಂಗಳೂರು ಬಂದರು | *(ii)* 2011 |
| C. ಮಂಗಳೂರು ವಿಮಾನ ನಿಲ್ದಾಣ | *(iii)* 1974 |
| D. ಬೆಂಗಳೂರು ಮೆಟ್ರೋ ರೈಲು ಯೋಜನೆ | *(iv)* 2003 |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(iv)* | *(iii)* | *(i)* | *(ii)* |
| (2) | *(i)* | *(iii)* | *(iv)* | *(ii)* |
| (3) | *(iii)* | *(iv)* | *(i)* | *(ii)* |
| (4) | *(ii)* | *(i)* | *(iv)* | *(iii)* |

**13.** ಈ ಕೆಳಗಿನ ಹೇಳಿಕೆಯನ್ನು ಪರಿಗಣಿಸಿ :

A. ಭೂಮಿಯ ಮೇಲ್ಮೈಯಿಂದ 50 ಕಿ.ಮೀ. ಎತ್ತರದವರೆಗೆ ವಾಯು ಸ್ತಂಭದಲ್ಲಿರುವ ಓಜೋನ್ ಒಟ್ಟು ಪ್ರಮಾಣವನ್ನು 'ಒಟ್ಟು ಸ್ತಂಭ ಓಜೋನ್' ಎಂದು ಕರೆಯುತ್ತಾರೆ.

B. ಒಟ್ಟು ಸ್ತಂಭ ಓಜೋನ್ ಅನ್ನು ಡಾಬ್ಸನ್ ಯೂನಿಟ್ (ಡಿಯು)ನಲ್ಲಿ ದಾಖಲಿಸಲಾಗುತ್ತದೆ.

C. ಓಜೋನ್ ಪದರದ ಕುಗ್ಗುವಿಕೆಯನ್ನು ಮೊದಲು ಅಂಟಾರ್ಕ್‌ಟಿಕಾದಲ್ಲಿ ಗಮನಿಸಲಾಯಿತು.

D. ಸಿಎಫ್‌ಸಿಗಳು, ಹ್ಯಾಲೋನ್‌ಗಳು $CCl_4$ ಇವು ಪ್ರಮುಖ ಓಜೋನ್ ಕುಗ್ಗುವಿಕೆಯ ಪದಾರ್ಥಗಳಾಗಿವೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

(2) ಮೂರು ಹೇಳಿಕೆಗಳು ಸರಿಯಾಗಿವೆ

(3) ಎರಡು ಹೇಳಿಕೆಗಳು ಸರಿಯಾಗಿವೆ

(4) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

**14.** ಮಾಲ್ಡೀವ್ಸ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಮಾಲ್ಡೀವ್ಸ್ 996 ದ್ವೀಪಗಳನ್ನು ಒಳಗೊಂಡಿರುವ ಒಂದು ದ್ವೀಪಸಮೂಹವಾಗಿದೆ.

B. ಒಟ್ಟು ದ್ವೀಪಗಳ ಪೈಕಿ 100 ದ್ವೀಪಗಳಲ್ಲಿ ಮಾತ್ರ ಜನರು ವಾಸಿಸುತ್ತಿದ್ದಾರೆ.

C. ಅಡ್ಡು ಅಟೋಲ್‌ನಲ್ಲಿರುವ ಎಂಎಸ್‌ಎಲ್ ಮೇಲಿನ ಗರಿಷ್ಠ ಬಿಂದುವು 2·4 ಎಂ ಆಗಿದೆ.

D. ಮಾಲ್ಡಿವಿಯನ್ ದಿವೇಹಿಯು ಸಿನ್ಹಾಲಾ ಭಾಷೆಯ ಒಂದು ಭಾಷಾ ಪ್ರಭೇದವಾಗಿದೆ.

E. ಮಾಲ್ಡೀವ್ಸ್‌ನ ಬಹುಸಂಖ್ಯೆಯ ಜನಸಂಖ್ಯೆಯು ಷಿಯಾ ಮುಸ್ಲಿಮರಾಗಿದ್ದಾರೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

(4) ಈ ಮೇಲಿನ ಹೇಳಿಕೆಗಳಲ್ಲಿ ಯಾವುದೂ ಸರಿಯಾಗಿಲ್ಲ

SHIKARAT.COM

15. ಈ ಕೆಳಗಿನ ಸಣ್ಣ ಭೂರಚನಾ ವಿಜ್ಞಾನ ಸ್ಥಾವರವನ್ನು ಪರಿಗಣಿಸಿ :

A. ನಾಝ್ಕಾ ಫಲಕ — ಸೌದಿ ಅರೇಬಿಯನ್ ಭೂ ದ್ರವ್ಯರಾಶಿ

B. ಕೋಕೊಸ್ ಫಲಕದ — ಕೇಂದ್ರೀಯ ಅಮೇರಿಕಾ ಫಲಕ ಮತ್ತು ಪೆಸಿಫಿಕ್ ನಡುವೆ

C. ಫಿಲಿಪೀನ್ ಫಲಕ — ಏಷಿಯಾಟಿಕ್ ಮತ್ತು ಪೆಸಿಫಿಕ್ ಫಲಕದ ನಡುವೆ

D. ಕ್ಯಾರೋಲಿನ್ ಫಲಕ — ಫಿಲಿಪೀನ್ ಮತ್ತು ಭಾರತೀಯ ಫಲಕದ ನಡುವೆ

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

16. ಇತ್ತೀಚೆಗೆ 'ವಿನ್ಸ್' ಅವಾರ್ಡ್‌ನ ಮೊದಲನೇ ಆವೃತ್ತಿಯನ್ನು ನಗರ ಮತ್ತು ಗೃಹ ನಿರ್ಮಾಣ ವ್ಯವಹಾರಗಳ ಕೇಂದ್ರ ಸಚಿವಾಲಯವು ಪ್ರಕಟಿಸಲಾಯಿತು. ಇದಕ್ಕೆ ಸಂಬಂಧಿಸಿ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ?

(1) ಪರಿಸರ-ಸ್ನೇಹಿ ಕಟ್ಟಡ ಪ್ರಾಜೆಕ್ಟ್‌ಗಳಿಗಾಗಿ ನೀಡುವ ಶ್ರೇಷ್ಠ ಅವಾರ್ಡ್ ಆಗಿದೆ

(2) ದೊಡ್ಡ ನಗರಗಳಿಗೆ ಅವುಗಳ ಸ್ವಚ್ಛತಾ ಕಾರ್ಯಕ್ಕಾಗಿ ನೀಡುವುದು

(3) ಸ್ವಚ್ಛತಾ ಕಾರ್ಯಾರಂಭದಲ್ಲಿ ಮಹಿಳೆಯರಿಗೆ ಮತ್ತು ಮಹಿಳಾ ಮುಂದಾಳತ್ವ ಸಂಸ್ಥೆಗೆ ನೀಡುವುದು

(4) ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಶೀಘ್ರ ಅನುಷ್ಠಾನಕ್ಕಾಗಿ ರಾಜ್ಯಕ್ಕೆ ನೀಡುವುದು

17. ಕೆಲ ಜೌಗು ಭೂಮಿ (Wetland) ಸಂರಕ್ಷಣಾ ಸ್ಥಳಗಳು ಇತ್ತೀಚೆಗೆ ಭಾರತದಲ್ಲಿ ಸೇರಿಕೊಂಡಿವೆ. ಇದಕ್ಕೆ ಸಂಬಂಧಿಸಿದಂತೆ ಕೆಳಗಿನ ರಾಮಸರ್ ಸ್ಥಳಗಳು ಸರಿಯಾಗಿ ಹೊಂದಿಕೆಯಾಗಿವೆ :

A. ಲೋನಾರ್ ಸರೋವರ — ಮಹಾರಾಷ್ಟ್ರ

B. ಚಿತ್ರಾಂಗುಡಿ ಪಕ್ಷಿಧಾಮ — ಕರ್ನಾಟಕ

C. ಕಬರ್‌ತಾಲ್ ಜೌಗು ಭೂಮಿ — ಉತ್ತರಾಖಂಡ್

D. ಅಷ್ಟಮುಡಿ ಜೌಗು ಭೂಮಿ — ಕೇರಳ

E. ರುದ್ರಸಾಗರ ಸರೋವರ — ತ್ರಿಪುರ

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A, B ಮತ್ತು C ಮಾತ್ರ

(2) A, C, D ಮತ್ತು E ಮಾತ್ರ

(3) A, D ಮತ್ತು E ಮಾತ್ರ

(4) A, B, D ಮತ್ತು E ಮಾತ್ರ

18. ಭಾರತ ಉಪಖಂಡದ ಸಚಿವ ಸಂಪುಟದ ಮಂತ್ರಿಯಾದ ಭಾರತದ ಮೊದಲ ಮಹಿಳೆ ಯಾರು? ಹಾಗೆಯೇ, ಸ್ವಾತಂತ್ರ್ಯದ 75 ವರ್ಷಗಳ ಅವಧಿಯಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಒಬ್ಬ ನಾಯಕರುಗಳಲ್ಲಿ (Heroes) ಒಬ್ಬರಾಗಿದ್ದಾರೆ

(1) ಮೇವಿಸ್ ಡುನ್ನ್ ಲಿಂಗ್‌ಡೋಹ್

(2) ರಾಜಕುಮಾರಿ ಅಮೃತ್ ಕೌರ್

(3) ಸುಚೇತಾ ಕೃಪಲಾನಿ

(4) ವಿಜಯ ರಾಜೆ ಸಿಂಧಿಯಾ



SHIKARAT.COM

**19.** ಭೌಗೋಳಿಕ ಸೂಚ್ಯಾಂಕ ರಿಜಿಸ್ಟ್ರಾರ್‌ರವರು ಕೆಲವು ಜಿಐ ಟ್ಯಾಗ್‌ಗಳನ್ನು ಸೇರಿಸಿದರು. ಇದಕ್ಕೆ ಸಂಬಂಧಿಸಿದಂತೆ, ಕೆಳಗಿನ ಯಾವ ಹೊಂದಾಣಿಕೆಗಳು ಸರಿಯಾಗಿವೆ?

A. ಅನಾರ್‌ದಾನ — ಜಮ್ಮು ಮತ್ತು ಕಾಶ್ಮೀರ

B. ವಾಂಚೂ ವುಡನ್ ಕ್ರಾಫ್ಟ್ — ಸಿಕ್ಕಿಂ

C. ಕಾಲೂನ್ಯೂನಿಯ ರೈಸ್ — ಕೇರಳ

D. ಕೊರಾಪುಟ್ ಕಾಲಾಜೀರ ರೈಸ್ — ಒಡಿಸ್ಸಾ

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಒಂದು ಮಾತ್ರ ಸರಿಯಾಗಿದೆ

(2) ಎರಡು ಹೊಂದಾಣಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೊಂದಾಣಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲ ಹೊಂದಾಣಿಕೆಗಳೂ ಸರಿಯಾಗಿವೆ

**20.** ಡಬ್ಲ್ಯೂಇಬಿ 3·0 ಬಗ್ಗೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

A. ತಮ್ಮ ಸ್ವಂತ ಡಾಟಾವನ್ನು ನಿಯಂತ್ರಿಸಲು ಜನರಿಗೆ ಇದು ಸಾಧ್ಯವಾಗಿಸುತ್ತದೆ.

B. ಮಧ್ಯವರ್ತಿಗಳಿಲ್ಲದೆ ಸಮಾನರ ನಡುವಿನ (peer-to-peer) ಪರಸ್ಪರ ಕ್ರಿಯೆಗೆ ಅನುಮತಿಸುತ್ತದೆ.

C. ಇದು ಕ್ರಿಪ್ಟೋ ಕರೆನ್ಸಿಯನ್ನು ಒಳಗೊಂಡಿರುವುದಿಲ್ಲ.

D. ಇದನ್ನು ಬ್ಲಾಕ್ ಚೈನ್ (ಸುತ್ತು ಸರಪಣಿ) ತಂತ್ರಜ್ಞಾನದಲ್ಲಿ ಬಳಸುವಂತಿಲ್ಲ.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(1) B ಮಾತ್ರ ಸರಿಯಾಗಿದೆ

(2) C ಮಾತ್ರ ಸರಿಯಾಗಿದೆ

(3) A ಮಾತ್ರ ಸರಿಯಾಗಿದೆ

(4) ಮೇಲಿನ ಎಲ್ಲವೂ ಸರಿಯಾಗಿವೆ



SHIKARAT.COM

21. ಭಾರತವು ಇತ್ತೀಚೆಗೆ ಟಿಇಪಿಎ (ವ್ಯಾಪಾರ ಮತ್ತು ಆರ್ಥಿಕ ಪಾಲುಗಾರಿಕೆ ಒಪ್ಪಂದ) ಕ್ಕಾಗಿ ಇಎಫ್‌ಟಿಎ ದೇಶಗಳೊಂದಿಗೆ ಮಾತುಕತೆಯನ್ನು ಮತ್ತೆ ಪುನರಾರಂಭಿಸಿತು. ಕೆಳಗಿನ ಯಾವ ದೇಶಗಳು ಇಎಫ್‌ಟಿಎ ಸಂಘದ ಸದಸ್ಯರುಗಳಾಗಿವೆ?

A. ಲಿಚೆಸ್ಟನ್

B. ನಾರ್ವೆ

C. ಸ್ವೀಡನ್

D. ಡೆನ್ಮಾರ್ಕ್

E. ಐಸ್‌ಲ್ಯಾಂಡ್

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) B, C ಮತ್ತು D ಮಾತ್ರ

(2) A, C ಮತ್ತು E ಮಾತ್ರ

(3) A, B ಮತ್ತು E ಮಾತ್ರ

(4) B, C ಮತ್ತು E ಮಾತ್ರ

22. ಭಾರತದ ಕೇಂದ್ರ ಸರ್ಕಾರವು ತಮ್ಮ ಮುಂದಾಳತ್ವದಿಂದ ಪಡೆದುಕೊಂಡಿರುವ ಕೆಳಗಿನ ಯಾವ ಅವಾರ್ಡ್/ಗಳ ಸರಿಯಾದ ಹೊಂದಾಣಿಕೆ ಜೋಡಿಗಳಾಗಿವೆ?

A. ಸೆಂಟ್ ಆಂಡ್ರ್ಯೂ ಆದೇಶ — ಯುನೈಟೆಡ್ ಕಿಂಗ್‌ಡಮ್

B. ಇಝುದ್ದೀನ್‌ನ ವಿಶಿಷ್ಟ ನಿಯಮಾದೇಶ — ಮಾಲ್ಡೀವ್ಸ್

C. ಜಾಯೆದ್‌ನ ಆದೇಶ — ಯುನೈಟೆಡ್ ಅರಬ್ ಎಮಿರೇಟ್ಸ್

D. ಲೀಜನ್ ಆಫ್ ಮೆರಿಟ್ — ಅಮೇರಿಕಾದ ಸಂಯುಕ್ತ ಸಂಸ್ಥಾನಗಳು

E. ಲೀಜನ್ ಆಫ್ ಹಾನರ್ — ಫ್ರಾನ್ಸ್

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲವೂ ಸರಿಯಾಗಿವೆ

(2) ನಾಲ್ಕು ಮಾತ್ರ ಸರಿಯಾಗಿವೆ

(3) ಮೂರು ಮಾತ್ರ ಸರಿಯಾಗಿವೆ

(4) ಒಂದು ಮಾತ್ರ ಸರಿಯಾಗಿದೆ



SHIKARAT.COM

23. ಕೆಳಗಿನ ಯಾವ ಹೇಳಿಕೆಗಳು 'ಅಂತರ್‌ಸರ್ಕಾರದ ಸಂಧಾನಗಳ ಚೌಕಟ್ಟನ್ನು' ಅತ್ಯುತ್ತಮವಾಗಿ ವಿವರಿಸುತ್ತವೆ?

(1) ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಸಾಧನವನ್ನು ಅಭಿವೃದ್ಧಿಪಡಿಸಲು ಚೌಕಟ್ಟನ್ನು ರೂಪಿಸಲಾಗಿದೆ.

(2) ಯನೈಟೆಡ್ ನೇಷನ್ಸ್ ಭದ್ರತಾ ಪರಿಷತ್ತನ್ನು ಪುನಃ ರೂಪಿಸಲು ರೂಪಿಸಲಾಗಿದೆ.

(3) 1·5° ಸೆಲ್ಸಿಯಸ್‌ಗಿಂತ ಕಡಿಮೆ ವಿಶ್ವ ಶಾಖದ ಉಷ್ಣಾಂಶದಲ್ಲಿಡಲು ಕೈಗೊಂಡ ಕ್ರಮಗಳನ್ನು ಪುನರ್‌ಪರಿಶೀಲಿಸಲು ರೂಪಿಸಲಾಗಿದೆ.

(4) ಬಾಹ್ಯಾಕಾಶದ ಶಾಂತಿಯುತ ಬಳಕೆಗಾಗಿ ಅಂತರಸರ್ಕಾರದ ಚೌಕಟ್ಟಾಗಿದೆ.

24. ನಾಗರ್ನೋ-ಕಾರಬಕ್ ಪ್ರದೇಶ ಸಂಘರ್ಷಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

A. ಅಜ್ಞರ್‌ಬೈಜಾನ್ ಮತ್ತು ಅರ್ಮೇನಿಯಾಗಳ ನಡುವಿನ ವಿವಾದದ ಪ್ರದೇಶವಾಗಿದೆ.

B. ಕ್ಯಾಸ್ಪಿಯನ್ ಸಮುದ್ರದ ಗಡಿ ಪ್ರದೇಶವಾಗಿದೆ.

C. ಈ ಹಿಂದಿನ ಸೋವಿಯತ್ ಒಕ್ಕೂಟದ ಭಾಗವಾಗಿದೆ.

D. ಪ್ರಮುಖವಾಗಿ ಅರ್ಮೇನಿಯನ್ ಜನರು ವಾಸಿಸುವ ಪ್ರದೇಶವಾಗಿದೆ.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ/ವೆ?

(1) A, B ಮತ್ತು D ಮಾತ್ರ

(2) B, C ಮತ್ತು D ಮಾತ್ರ

(3) A, C ಮತ್ತು D ಮಾತ್ರ

(4) A, B ಮತ್ತು C ಮಾತ್ರ

25. ಕೆಟಲಿನ್ ಕರಿಕೊ ಮತ್ತು ಡ್ರ್ಯೂ ವೈಸ್ಮನ್‌ನ ಜೋಡಿಗೆ ತಮ್ಮ ಕೆಲಸಕ್ಕಾಗಿ ವೈದ್ಯಕೀಯ ನೊಬೆಲ್ ಪ್ರಶಸ್ತಿಯನ್ನು ಕೊಡಲಾಗಿದೆ?

(1) ಕ್ಯಾನ್ಸರ್ ವಿರುದ್ಧ ಹೋರಾಡುವುದಕ್ಕಾಗಿ mRNA ಲಸಿಕೆಯನ್ನು ಬಳಸಿದ್ದಕ್ಕಾಗಿ

(2) ಅಲ್ಜೈಮರ್ ರೋಗದ ಬಗ್ಗೆ ಅವರು ಅಧ್ಯಯನ ಮಾಡಿದ್ದಕ್ಕಾಗಿ

(3) ಚಿಪ್ ಆಧಾರಿತ ನರವೈಜ್ಞಾನಿಕ ಪ್ರಚೋದನೆಗಳಲ್ಲಿ ಅವರ ಕೊಡುಗೆಗಾಗಿ ನೀಡಲಾಗಿದೆ

(4) ಕೋವಿಡ್ ವಿರುದ್ಧವಾಗಿ mRNA ಲಸಿಕೆಯನ್ನು ಬಳಸಿದ್ದಕ್ಕಾಗಿ ಕೊಡಲಾಗಿದೆ



SHIKARAT.COM

**26.** ಬಿದ್ರಿವೇರ್‌ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಬಿದ್ರಿವೇರ್ ಎಂಬದು 500 ವರ್ಷಗಳ ಹಿಂದಿನ ವಸ್ತುವಾಗಿದೆ. ಅದು ಮೂಲತಃ ಪರ್ಷಿಯನ್‌ದಾಗಿದೆ, ಆದರೆ ಬಿದ್ರಿವೇರ್ ಕೇವಲ ಭಾರತೀಯ ನಾವೀನ್ಯತೆಯಾಗಿದೆ.

B. ಕ್ರಿಸ್ತಶಕ 14-15ನೇ ಶತಮಾನದಲ್ಲಿ ಬೀದರ್‌ನಲ್ಲಿ ಆಳ್ವಿಕೆ ನಡೆಸುತ್ತಿದ್ದ ಬಹುಮನಿ ಸುಲ್ತಾನರು ಬಿದ್ರಿವೇರ್‌ಅನ್ನು ಅಭಿವೃದ್ಧಿಪಡಿಸಿದರು.

C. ಬಿದ್ರಿವೇರ್ ಎಂಬುದು ಬೆಳ್ಳಿಯಲ್ಲಿ ಡ್ಯಾಮಸ್ಸನ್ನಿಂಗ್ ಎಂದು ಕರೆಯಲ್ಪಡುವ ಬೆಳ್ಳಿ ಲೋಹದ ವಸ್ತುವಾಗಿದೆ.

D. ಬಿದ್ರಿವೇರ್ ಎಂಬುದು ಭೌಗೋಳಿಕ ಸೂಚನೆಗಳ ನೋಂದಣಿಯಾಗಿದೆ.

ಮೇಲಿನ ಯಾವ ಹೇಳಿಕೆಗಳು ತಪ್ಪಾಗಿದೆ/ವೆ?

(1) A ಮಾತ್ರ

(2) B ಮತ್ತು C ಮಾತ್ರ

(3) C ಮತ್ತು D ಮಾತ್ರ

(4) ಮೇಲಿನ ಯಾವುದೂ ಅಲ್ಲ

**27.** ಭಾರತದಲ್ಲಿ, ನಾವು ಮೂರು ಮುಖ್ಯ ಬೌದ್ಧಿಕ ಪರಂಪರೆಗಳು ಎಂದರೆ ನಿಗಮ ಪರಂಪರೆ, ಆಗಮ ಪರಂಪರೆ ಮತ್ತು ಸ್ರಮಾನ ಪರಂಪರೆಗಳನ್ನು ಕಾಣುತ್ತೇವೆ :

A. ನಿಗಮ ಪರಂಪರೆಯು (ವೇದ. ಎಂಬುದಾಗಿಯೂ ಕರೆಯುತ್ತಾರೆ) ವೇದಗಳನ್ನು ಸನಾತನವೆಂದು ಅಥವಾ ದೇವರ ಬೋಧನೆಗಳೆಂದು ನಂಬುತ್ತದೆ. ಆದರೆ ಅವುಗಳ ಆಧಾರ ಗ್ರಂಥಗಳನ್ನು ನಿರಾಕರಿಸಬಹುದಾಗಿದೆ.

B. ಆಗಮ ಪರಂಪರೆಯಲ್ಲಿ, ಅನುಯಾಯಿಗಳು ತಮ್ಮ ವಿಭಿನ್ನ ಅನುಭಾವಗಳಿಂದ ದೈವನು ಬೋಧಿಸುವ ದೈವಿಕ ದಿವ್ಯಜ್ಞಾನವೆಂದು ಪರಿಗಣಿಸುವ ತಮ್ಮ ಸ್ವಂತ ಪವಿತ್ರ ಗ್ರಂಥಗಳನ್ನು ಹೊಂದಿರುವರು.

C. ಸ್ರಮಾನ ಪರಂಪರೆಯವರು ಕಠಿಣ ಜೀವನವನ್ನು ನಡೆಸುತ್ತಿರುವ ಸಂನ್ಯಾಸಿಗಳಾಗಿರುವರು, ವೇದಗಳ ಕಾಲದ ಧಾರ್ಮಿಕ ಸಂಸ್ಕೃತಿಯ ವಿರುದ್ಧ ವಿರೋಧ ವ್ಯಕ್ತಪಡಿಸುವ ಹಾಗೂ ನೈತಿಕ ಜೀವನವನ್ನು ನಡೆಸುವ ಬಗ್ಗೆ ಪ್ರಾಮುಖ್ಯತೆ ಕೊಡುವ ವಿಭಿನ್ನ ಸ್ರಾಮಾನಿಕ್ ವರ್ಗಗಳು.

ಮೇಲಿನ ಯಾವ ಹೇಳಿಕೆಗಳು ತಪ್ಪಾಗಿದೆ/ವೆ?

(1) A ಮಾತ್ರ

(2) B ಮಾತ್ರ

(3) C ಮಾತ್ರ

(4) A ಮತ್ತು B ಮಾತ್ರ

SHIKAPAT.COM

28. ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| ಸಾಹಿತ್ಯ ಕೃತಿ | ಲೇಖಕರು |
|---|---|
| *(a)* ಅಭಿಜ್ಞಾನ ಶಾಕುಂತಲ | ಕಾಳಿದಾಸ |
| *(b)* ಯೋಗಸೂತ್ರ | ವ್ಯಾಸ |
| *(c)* ನಾಟ್ಯಶಾಸ್ತ್ರ | ಭರತಮುನಿ |
| *(d)* ಪಂಚತಂತ್ರ | ಪತಂಜಲಿ |

ಮೇಲಿನ ಯಾವ ಜೋಡಿಗಳು ಸರಿಯಾಗಿ ಹೊಂದಿಕೆಯಾಗುತ್ತಿದೆ/ವೆ?

(1) *(a)* ಮಾತ್ರ

(2) *(a)* ಮತ್ತು *(c)*

(3) *(c)* ಮತ್ತು *(d)*

(4) *(b)*, *(c)* ಮತ್ತು *(d)*

29. ವರ್ಣರಂಜಿತ ವರ್ಣಚಿತ್ರದ ಮೊಘಲ್ ಶೈಲಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಮೊಘಲರ ವರ್ಣಚಿತ್ರದ ಶಿಖರವು ಇಸ್ಲಾಮಿಕ್, ಹಿಂದೂ ಮತ್ತು ಯೂರೋಪಿನ ಚಾಕ್ಷುಷ ಪ್ರದರ್ಶನ ಸಂಸ್ಕೃತಿ ಮತ್ತು ಸೌಂದರ್ಯಶಾಸ್ತ್ರಗಳ ಅತಿ ವಿಶೇಷವಾದ ಅತ್ಯಾಧುನಿಕ ಸಮ್ಮಿಶ್ರಣವನ್ನು ಪ್ರದರ್ಶಿಸುತ್ತದೆ.

B. ಅಕ್ಬರ್ ತನ್ನ ಆಸ್ಥಾನದಲ್ಲಿ ಕಲಾ ಮಂದಿರ ಮತ್ತು ಆಕರ್ಷಕ ಭವ್ಯ ವರ್ಣಚಿತ್ರಗಳನ್ನು ನೆಲೆಗೊಳಿಸಲು ಇಬ್ಬರು ಪರ್ಷಿಯನ್ ಕಲಾವಿದರಾದ –ಮೀರ್ ಸಯ್ಯದ್ ಅಲಿ ಮತ್ತು ಅಬ್ದ್ ಅಸ್ ಸಮದ್‌ರನ್ನು ಆಹ್ವಾನಿಸಿದ್ದನು.

C. ಚಿತ್ರಗಳಲ್ಲಿ ಲೇಪಿಸಲಾದ ಮರಖ್ಯಾಸ್ ವಿಶಿಷ್ಟವಾದ ವರ್ಣಚಿತ್ರಗಳು ಜಹಂಗೀರ್ ಕಾಲದಲ್ಲಿ ಜನಪ್ರಿಯವಾಗಿದ್ದವು.

D. ಕಾಗದದ ಮೇಲೆ ಅಪಾರದರ್ಶಕ ಜಲವರ್ಣದಲ್ಲಿ ಚಿತ್ರಿಸಿದ ಮಡೋನ (ಮೇರಿ ಕನ್ಯೆಯ ಚಿತ್ರಣ) ಮತ್ತು ಆಕೆಯ ಮಗು ಮೊಘಲ್ ವರ್ಣಚಿತ್ರ ಶೈಲಿಯ ಪ್ರಸಿದ್ಧ ಪ್ರಾಚೀನ ಕುಶಲ ಕಲೆಯಾಗಿದೆ.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ/ವೆ?

(1) B, C ಮತ್ತು D

(2) A, B ಮತ್ತು C

(3) A, C ಮತ್ತು D

(4) A, B ಮತ್ತು D

30. ಕೆಳಗಿನವುಗಳಲ್ಲಿ ಯಾವುವು ಜೈನಧರ್ಮದಲ್ಲಿನ 5 ಪ್ರಸಿದ್ಧ ದೀಕ್ಷಾ ಪ್ರತಿಜ್ಞೆಗಳ ಭಾಗವಾಗಿವೆ :

A. ಆಸ್ತೇಯ

B. ಬ್ರಹ್ಮಚರ್ಯ

C. ಸಂಯಿಕ

D. ಅಪರಿಗ್ರಹ

E. ಕಾಯೋತ್ಸರ್ಗ

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ/ವೆ?

(1) A, B ಮತ್ತು D

(2) B, C ಮತ್ತು E

(3) C, D ಮತ್ತು E

(4) A, B ಮತ್ತು C

SHIKARAT.COM

**31.** ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| ದೇವಾಲಯಗಳು / ದೇವಾಲಯಗಳಿಗೆ ಸಂಬಂಧಿಸಿದ ಮೂಲಾಂಶಗಳು | ವೈಶಿಷ್ಟ್ಯಗಳು |
|---|---|
| *(a)* ಮೊದೇರ ದೇವಾಲಯ, ಬಾಲಾಜಿ ದೇವಾಲಯ, ಉನ್ನಾವ್ ಮಾರ್ತಾಂಡ ದೇವಾಲಯ, ಅನಂತನಾಗ್ | ಸೂರ್ಯದೇವನಿಗೆ ಸಮರ್ಪಿತವಾದ ದೇವಾಲಯಗಳು |
| *(b)* ಸೂರ್ಯ ದೇವಾಲಯ, ಕೊನಾರ್ಕ್ ಜೈನ ದೇವಾಲಯಗಳು, ರಾಣಾಕಪೂರ್ ಸತ್ಯಮೂರ್ತಿ ಪೆರುಮಾಳ್ ದೇವಾಲಯ | ಕಾಮಪ್ರಚೋದಕ ಶಿಲ್ಪಕಲೆಗಳ ವಿಶಿಷ್ಟ ಲಕ್ಷಣದ ದೇವಾಲಯಗಳು |
| *(c)* ಶಿಖರ, ಅಮಾಲಕ, ಅದಿಷ್ಟಾನ | ನಾಗರ ವಾಸ್ತುಶಿಲ್ಪದ ವಿಶೇಷ ಲಕ್ಷಣ ಗೋಚರಿಸಲು ಸಹಾಯಕವಾಗುವ ಮೂಲಾಂಶಗಳು |

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತಿದೆ/ವೆ?

(1) *(a)* ಮಾತ್ರ

(2) *(b)* ಮಾತ್ರ

(3) *(a)*, *(b)* ಮತ್ತು *(c)*

(4) ಮೇಲಿನ ಯಾವುದೂ ಅಲ್ಲ

**32.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ಸರಿಯಾದ ಹೇಳಿಕೆ/ಗಳನ್ನು ಗುರುತಿಸಿ :

A. ಕವಿರಾಜಮಾರ್ಗವು ಕನ್ನಡ ಸಾಹಿತ್ಯದಲ್ಲಿ ಮೊದಲ ಪದ್ಯಕೃತಿಯಾಗಿದೆ.

B. ಇದನ್ನು ರಾಷ್ಟ್ರಕೂಟರ ಕಾಲಾವಧಿಯಲ್ಲಿ ಬರೆಯಲಾಯಿತು.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಅಥವಾ B ಯಾವುದೂ ಸರಿಯಿಲ್ಲ

**33.** 'ಯಾಲಿ'ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

(1) ಮಣಿಪುರ ರಾಜ್ಯದಲ್ಲಿ ಜನ್ಮ ತಳೆದಿರುವ ನೃತ್ಯವು, ಹಲವು ಧಾರ್ಮಿಕ ಆಚರಣೆಗಳು ಮತ್ತು ಸಾಂಪ್ರದಾಯಿಕ ಹಬ್ಬಗಳಿಗೆ ಸಂಬಂಧಿಸಿದೆ.

(2) ದೇವಾಲಯ ವಾಸ್ತುಶಿಲ್ಪದ ಶೈಲಿ ಕಾಶ್ಮೀರ ಪ್ರದೇಶಗಳಲ್ಲಿ ಜನಪ್ರಿಯವಾಗಿರುವುದು.

(3) ದಕ್ಷಿಣ ಏಷ್ಯಾದಲ್ಲಿ ದೇವಾಲಯಗಳ ಹೊರಗಿನ ಸ್ತಂಭಗಳು ಮತ್ತು ಗೋಡೆಗಂಭಗಳ ಮೇಲೆ ಹಿಂದೂ ಧರ್ಮದ ಪೌರಾಣಿಕ ಕೈಗೊಂಬೆಯ ಶಿಲ್ಪಕಲೆಯಿದೆ.

(4) ಮಧ್ಯಪ್ರದೇಶದಲ್ಲಿನ ಸಾಂಪ್ರದಾಯಿಕ ಸೀರೆ ನೇಯುವ ಪ್ರಕ್ರಿಯೆಯ ವಿಧಾನವಾಗಿದೆ.

SHIKARAT.COM

**34.** ಬೌದ್ಧಧರ್ಮದ ಬೋಧಿಸತ್ವಕ್ಕೆ ಸಂಬಂಧಿಸಿ, ಈ ಕೆಳಕಂಡವರುಗಳಲ್ಲಿ ಯಾರು ಲೋಕಜ್ಞಾನದ ಬೋಧಿಸತ್ವವಾಗಿದ್ದಾರೆ?

(1) ಮಂಜುಶ್ರೀ

(2) ಅವಲೋಕಿತೇಶ್ವರ

(3) ಮೈತ್ರೇಯಿ

(4) ವಜ್ರಪಾಣಿ

**35.** ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5(ಎನ್‌ಎಫ್‌ಎಚ್‌ಎಸ್ 5)ಕ್ಕೆ ಸಂಬಂಧಿಸಿ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಕರ್ನಾಟಕದಲ್ಲಿ ಎನ್‌ಎಫ್‌ಎಚ್‌ಎಸ್ 4ಕ್ಕೆ ಹೋಲಿಸಿದಾಗ ಒಟ್ಟು ಜನನಶಕ್ತಿಯ ದರದಲ್ಲಿ ಇಳಿಕೆಯಾಗಿರುವುದು ಕಂಡುಬಂದಿದೆ.

B. ಕಳೆದ ಐದು ವರ್ಷಗಳಲ್ಲಿ ಮಕ್ಕಳ ಜನನದ ಪ್ರಮಾಣದಲ್ಲಿ ಲಿಂಗ ಅನುಪಾತ ಕರ್ನಾಟಕದಲ್ಲಿ ಹೆಚ್ಚಾಗಿದೆ.

C. ಕರ್ನಾಟಕದಲ್ಲಿ ಸರಿಸುಮಾರು ಪುರುಷ ಮತ್ತು ಮಹಿಳೆಯರು (15-49 ವರ್ಷಗಳ ವಯಸ್ಸಿನ ನಡುವೆ ಇರುವ) ಶೇ. 30 ರಷ್ಟಿದ್ದಾರೆ.

D. ಕರ್ನಾಟಕದಲ್ಲಿ ಇಂಟರ್‌ನೆಟ್ ಅನ್ನು ಬಳಸುತ್ತಿರುವ ಪುರುಷರ ಪ್ರಮಾಣವು ಮಹಿಳೆಯರಿಗಿಂತ ಹೆಚ್ಚಾಯಿತು.

(1) 1 ಹೇಳಿಕೆ ಮಾತ್ರ ಸರಿಯಾಗಿದೆ

(2) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 3 ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲ 4 ಹೇಳಿಕೆಗಳೂ ಸರಿಯಾಗಿವೆ

**36.** ಪಟ್ಟಿ—*I*ನ್ನು ಪಟ್ಟಿ—*II* ರೊಂದಿಗೆ ಹೊಂದಿಸಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತವನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆಮಾಡಿ :

| ಪಟ್ಟಿ—*I* | ಪಟ್ಟಿ—*II* |
|---|---|
| ಮಹಾಜನಪದ | ರಾಜಧಾನಿ |
| A. ಚೇಡಿ | *(i)* ಸೂಕ್ತಮತಿ |
| B. ಮತ್ಸ್ಯ | *(ii)* ಬೈರಾಟ್ |
| C. ಕಾಂಬೋಜ | *(iii)* ರಾಜ್‌ಪುರ |
| D. ಅಸ್ಸಾಕ | *(iv)* ಪೋಟಲಿ |

ಸಂಕೇತ :

| | A | B | C | D |
|---|---|---|---|---|
| (1) | *(iii)* | *(ii)* | *(i)* | *(iv)* |
| (2) | *(iv)* | *(iii)* | *(ii)* | *(i)* |
| (3) | *(i)* | *(ii)* | *(iv)* | *(iii)* |
| (4) | *(i)* | *(ii)* | *(iii)* | *(iv)* |

37. ಪಟ್ಟಿ—*I*ನ್ನು ಪಟ್ಟಿ—*II* ರೊಂದಿಗೆ ಹೊಂದಿಸಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತವನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆಮಾಡಿ :

| ಪಟ್ಟಿ—*I* ಲೇಖಕ | | ಪಟ್ಟಿ—*II* ಪುಸ್ತಕ |
|---|---|---|
| A. ಸಂಧ್ಯಾಕಾರಣನಂದಿ | *(i)* | ವಿಕ್ರಮಾಂಕದೇವ ಚರಿತ |
| B. ಬಿಲ್ಹಣ | *(ii)* | ರಾಮಚರಿತ್ರ |
| C. ಹೇಮಚಂದ್ರ | *(iii)* | ಪೃಥ್ವಿರಾಜರಾಸೊ |
| D. ಚಾಂದ್ ಬರ್ದಾಯಿ | *(iv)* | ಕುಮ್ರಪಾಲಚರಿತ |

**ಸಂಕೇತ :**

| | A | B | C | D |
|---|---|---|---|---|
| (1) | *(i)* | *(ii)* | *(iii)* | *(iv)* |
| (2) | *(iv)* | *(iii)* | *(ii)* | *(i)* |
| (3) | *(ii)* | *(i)* | *(iv)* | *(iii)* |
| (4) | *(iii)* | *(iv)* | *(ii)* | *(i)* |

38. ಅಶೋಕನ ಈ ಕೆಳಕಂಡ ಯಾವ ಶಾಸನಗಳನ್ನು ಗ್ರೀಕ್ ಮತ್ತು ಅರೇಮಿಕ್ ಲಿಪಿಗಳಲ್ಲಿ ಕೆತ್ತಲಾಗಿದೆ?

(1) ಮಾನ್ಸೇಹ್ರಾ

(2) ಶಾರಿಕೂನ

(3) ಶಾಹಬಜ್ಗಾರ್ಹಿ

(4) ಜೂನಾಗಢ್

39. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ :

A. ಕಳಿಂಗದಿಂದ ನಂದ ರಾಜನು ತೆಗೆದುಕೊಂಡು ಹೋಗಿದ್ದ ಮೊದಲ ಜೈನ ಪ್ರತಿಮೆಯನ್ನು ರಾಜ ಖಾರವೇಲನು ವಾಪಸ್ಸು ತಂದನು.

B. ಕಲ್ಪಸೂತ್ರದ ಲೇಖಕ ಭದ್ರಬಾಹು, ಮಹಾವೀರನ ತರುವಾಯ ಆರನೇ ತೀರ್ಥಂಕರ ನಾಗಿದ್ದನು.

C. ಕ್ರಿ.ಶ. ಆರನೇ ಶತಮಾನದ ಕಾಲದಲ್ಲಿ ಸುಧರ್ಮನು ಅಧ್ಯಕ್ಷತೆ ವಹಿಸಿದ್ದ ಒಂದು ಜೈನ ಪರಿಷತ್ತನ್ನು ವಲಭಿಯಲ್ಲಿ ನಡೆಸಲಾಗಿತ್ತು.

ಮೇಲೆ ನೀಡಲಾಗಿರುವ ಹೇಳಿಕೆಗಳಲ್ಲಿ ಈ ಕೆಳಕಂಡ ಯಾವುದು ಸರಿಯಾಗಿದೆ / ಸರಿಯಾಗಿವೆ?

(1) A ಮತ್ತು B

(2) B ಮತ್ತು C

(3) A ಮತ್ತು C

(4) A, B ಮತ್ತು C

40. ಯಾವ ಆಧುನಿಕ ಚರಿತ್ರಕಾರರು ಕಬೀರನ ಬಗ್ಗೆ ಈ ಕೆಳಗಿನ ಹೇಳಿಕೆ ನೀಡಿದ್ದಾರೆ?

ಎಲ್ಲಾ ಜಾತಿ ಮತ್ತು ಸಮುದಾಯಗಳನ್ನು ಒಗ್ಗೂಡಿಸುವ ಪ್ರೀತಿಯ ಧರ್ಮವನ್ನು ಬೋಧಿಸುವುದು ಕಬೀರರ ಉದ್ದೇಶವಾಗಿತ್ತು. ಆತ ಈ ಅಂಶವನ್ನು ವಿರೋಧಿಸುವ ಹಿಂದೂ ಮತ್ತು ಇಸ್ಲಾಮ್ ಹೇಳಿಕೆಗಳನ್ನು ತಿರಸ್ಕರಿಸಿದ್ದ ಮತ್ತು ವ್ಯಕ್ತಿಯ ಆಧ್ಯಾತ್ಮಿಕ ಕ್ಷೇಮಕ್ಕೆ ಪ್ರಾಮುಖ್ಯತೆ ಕೊಡದ ಅಂಶಗಳನ್ನು ತಿರಸ್ಕರಿಸಿದ್ದ.

(1) ಪೀಟರ್ ಜಾಕ್ಸನ್

(2) ತಾರಾಚಂದ್

(3) ಜದುನಾಥ್ ಸರ್ಕಾರ್

(4) ಮುಹಮದ್ ಹಬೀಬ್



SHIKARAT.COM

**41.** ಹೇಮು ತನ್ನ ವಿರೋಧಿಗಳ ವಿರುದ್ಧ ಇಪ್ಪತ್ತೆರಡು ಕದನಗಳಲ್ಲಿ ಜಯಿಸಿದ್ದ ಎಂದು ಹೇಳಲಾಗಿದೆ. ಆ ಕಾಲದ ಯಾವ ಚರಿತ್ರಕಾರರ ಪ್ರಕಾರ ಅವನಿಗೆ 'ಬಿಕ್ರಮ್‌ಜಿತ್' ಎಂಬ ಬಿರುದು ನೀಡಲಾಗಿತ್ತು?

A. ಅಬುಲ್ ಫಜಲ್

B. ಅಬ್ದುಲ್ ಕಾದಿರ್ ಬದೌನಿ

C. ಅಬಾಸ್ ಶೇರ್‌ವಾನಿ

D. ನಿಜಾಮುದ್ದೀನ್ ಅಹಮದ್

ಸರಿ ಉತ್ತರ ಆರಿಸಿ :

(1) A ಮತ್ತು B

(2) B ಮತ್ತು D

(3) C ಮತ್ತು D

(4) A ಮತ್ತು D

**42.** ಈ ಕೆಳಗಿನವುಗಳಲ್ಲಿ ಯಾವುದು ಬಿಜಾಪುರದ ಇಬ್ರಾಹಿಂ ಆದಿಲ್‌ಶಾಹಿ IIರ ಸಂಬಂಧಿಸಿದ್ದಲ್ಲಾ?

(1) ಅಬ್ಲಾ ಬಾಬಾ

(2) ಕಿತಾಬ್-ಇ-ನೌರೋಸ್

(3) ಫಿರೋಜಾಬಾದ್ ನಿಂದ ನೌರಸ್‌ಪುರ್‌ಗೆ ರಾಜಧಾನಿಯ ಬದಲಾವಣೆ

(4) ಜಗತ್ ಗುರು

**43.** ಈ ಹೇಳಿಕೆಯ ಕುರಿತು ಈ ಕೆಳಗಿನ ಯಾವ ಅಂಶವು ಸರಿಯಾಗಿದೆ?

A. ರಿಸ್ಲಿಯು 1901 ರಲ್ಲಿ ಜನಗಣತಿಯ ಆಯುಕ್ತನಾದನು.

B. ಆತನು ಜನಗಣತಿಯ ದತ್ತಾಂಶದಲ್ಲಿ ಎಲ್ಲಾ ಜಾತಿಗಳನ್ನು ನಮೂದಿಸಲು ಪ್ರಸ್ತಾವಿಸಿದನು.

C. ಆತನು ಅವುಗಳ ಅನುಕ್ರಮ ಶ್ರೇಣಿಯನ್ನು ದಾಖಲಿಸಲು ನಿರ್ಧರಿಸಿದನು ಆದರೆ ಅವುಗಳ ಸ್ಥಳಗಳನ್ನಲ್ಲ.

D. ಆತನು ಅಂಗವಿಕಲ ಜನರ ಸಂಖ್ಯೆಯನ್ನು ಅವರ ಜಾತಿಗಳಿಗೆ ಅನುಗುಣವಾಗಿ ನಮೂದಿಸುವ ಒಂದು ವ್ಯವಸ್ಥೆಯನ್ನು ಸಹ ಕಲ್ಪಿಸಿದನು.

(1) A ಮತ್ತು B

(2) B ಮತ್ತು C

(3) C ಮತ್ತು D

(4) A, B, C ಮತ್ತು D

**44.** "ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌತ್ ಆಫ್ ಇಂಡಿಯಾ ಇನ್ ಆ್ಯನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್" ಎಂಬ ಹೆಸರಿನ ಹೆಸರಾಂತ ಲೋಕಪ್ರಸಿದ್ಧವಾದ ಈ ಕೃತಿಯನ್ನು ಯಾರು ಬರೆದಿದ್ದಾರೆ?

(1) ರಾಬರ್ಟ್ ಸೆವಲ್

(2) ಎಫ್. ರಾಬ್ಸನ್

(3) ರಾಬರ್ಟ್ ಆರ್ಮ್ಸ್

(4) ಮಾರ್ಕ್ ವಿಲ್ಕ್ಸ್

SHIKARAT.COM
ಶಿಕರತ್.ಕಾಂ

**45.** ಜೈನ ಶೈಲಿಯ ಪದ್ಮಾವತಿ ಸಮಾಧಿಯ ಪ್ರಸ್ತುತ ಕಟ್ಟಡವನ್ನು ಕ್ರಿ.ಶ. 1061ರಲ್ಲಿ ಈ ಕೆಳಕಂಡ ಯಾವ ಜೈನ ರಾಜನು ನಿರ್ಮಿಸಿದ್ದಾನೆ?

(1) ಜಿನದತ್ತ ರಾಯ

(2) ವಿಕ್ರಮ ಸಂತರ

(3) ವೀರ ಸಂತರ

(4) ಭುಜಬಲ ಸಂತರ

**46.** 1884ರ ರುಕ್ಕಮ್ಮಬಾಯಿ ವಿರುದ್ಧ ಭಿಕಾಜಿ ಕಾನೂನು ವಿವಾದವು ಯಾವ ಆಧಾರದ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಸಿತು?

A. ಮಹಿಳೆಯರು ಶಿಕ್ಷಣ ಪಡೆಯುವುದು.

B. ದಾಂಪತ್ಯದ ಹಕ್ಕನ್ನು ಕ್ಲೇಮು ಮಾಡುವುದು.

C. ಕೌಟುಂಬಿಕ ಪಿತ್ರಾರ್ಜಿತದ ಮೇಲೆ ಪುರುಷರ ಹಕ್ಕು.

D. ಸಮ್ಮತಿ ವಯಸ್ಸು.

(1) A ಮತ್ತು B

(2) B ಮತ್ತು C

(3) B ಮತ್ತು D

(4) A ಮತ್ತು D

**47.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ನವಣೆ, ರಾಗಿ ಮತ್ತು ಜೋಳದ ರಾಷ್ಟ್ರೀಯ ಸರಾಸರಿ ಪ್ರತಿ ಹೆಕ್ಟೇರ್ ಫಸಲು ಗೋಧಿ ಮತ್ತು ಅಕ್ಕಿಗಿಂತ ಹೆಚ್ಚಾಗಿರುತ್ತದೆ.

B. ಭಾರತ ಮಿಲ್ಲೆಟ್ ಉತ್ಪಾದನೆಯನ್ನು ಕಳೆದ ಎರಡು ದಶಕಗಳಲ್ಲಿ ಹೆಚ್ಚಿಸಿರುವುದು ಗಮನಾರ್ಹವಾಗಿದೆ.

C. ಕರ್ನಾಟಕವು ದೇಶದಲ್ಲಿ ಹೆಚ್ಚು ಮಿಲ್ಲೆಟ್ ಉತ್ಪಾದಿಸುವ ರಾಜ್ಯವಲ್ಲ.

ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿದೆ/ವೆ?

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) B ಮಾತ್ರ

**48.** ಭಾರತೀಯ ರಾಷ್ಟ್ರೀಯ ಚಳುವಳಿಯನ್ನು ಉಲ್ಲೇಖಿಸಿ–1907 ರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸೂರತ್ ಅಧಿವೇಶನದಲ್ಲಿ ಕರ್ನಾಟಕದಿಂದ ಭಾಗವಹಿಸಿದ ನಾಯಕರು

A. ಗಂಗಾಧರ ರಾವ್ ದೇಶಪಾಂಡೆ, ಗೋವಿಂದ ರಾವ್ ಯಾಳಗಿ, ಆಲೂರು ವೆಂಕಟರಾವ್, ಅಣ್ಣಾಚಾರ್ಯ ಹೊಸಕೇರಿ, ಶ್ರೀನಿವಾಸ ಕೌಜಲಗಿ.

B. ಗಂಗಾಧರ ರಾವ್ ದೇಶಪಾಂಡೆ, ಗೋವಿಂದ ರಾವ್ ಯಾಳಗಿ, ಆಲೂರು ವೆಂಕಟರಾವ್, ಅಣ್ಣಾಚಾರ್ಯ ಹೊಸಕೇರಿ.

C. ಗಂಗಾಧರ ರಾವ್ ದೇಶಪಾಂಡೆ, ಗೋವಿಂದ ರಾವ್ ಯಾಳಗಿ, ಆಲೂರು ವೆಂಕಟರಾವ್.

D. ಗಂಗಾಧರ ರಾವ್ ದೇಶಪಾಂಡೆ, ಗೋವಿಂದ ರಾವ್ ಯಾಳಗಿ.

ಮೇಲಿನ ನಾಯಕರ ಗುಂಪಿನಲ್ಲಿ ಕರ್ನಾಟಕದಿಂದ ಎಲ್ಲರೂ ಭಾಗವಹಿಸಿದ ಗುಂಪು ಯಾವುದು?

(1) ಕೇವಲ A

(2) ಕೇವಲ B

(3) ಕೇವಲ C

(4) ಮೇಲಿನ ಯಾವುದೂ ಅಲ್ಲ

SHIKARAT.COM

**49.** ಭಾರತೀಯ ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಉಲ್ಲೇಖಿಸಿ. ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| | **ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು** | **ಸ್ಥಳ** |
|---|---|---|
| A. | ಕಮಲಾದೇವಿ ಚಟ್ಟೋಪಾಧ್ಯಾಯ | ಮಂಗಳೂರು |
| B. | ಉಮಾಬಾಯಿ ಕುಂದಾಪುರ | ಹುಬ್ಬಳ್ಳಿ |
| C. | ಬಳ್ಳಾರಿ ಸಿದ್ದಮ್ಮ | ಕಲ್ಬುರ್ಗಿ |
| D. | ಕೃಷ್ಣಾಬಾಯಿ ಪಂಜೇಕರ್ | ಹೊನ್ನಾವರ |

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(1) ಕೇವಲ ಒಂದು

(2) ಕೇವಲ ಎರಡು

(3) ಕೇವಲ ಮೂರು

(4) ಮೇಲಿನ ಎಲ್ಲವೂ

**50.** ಭಾರತೀಯ ರಾಷ್ಟ್ರೀಯ ಚಳುವಳಿ ಮತ್ತು ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಉಲ್ಲೇಖಿಸಿ, ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| | **ಚಳುವಳಿ** | **ದಿನಾಂಕ** |
|---|---|---|
| A. | ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ | 13 ಏಪ್ರಿಲ್ 1930 |
| B. | ಶಿವಾಪುರ ಧ್ವಜ ಸತ್ಯಾಗ್ರಹ | 11 ಏಪ್ರಿಲ್ 1938 |
| C. | ವಿಧುರಾಶ್ವತ್ಥ ದುರಂತ | 25 ಏಪ್ರಿಲ್ 1938 |
| D. | ಈಸೂರು ದುರಂತ | 08 ಸೆಪ್ಟೆಂಬರ್ 1942 |

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(1) ಕೇವಲ ಒಂದು

(2) ಕೇವಲ ಎರಡು

(3) ಕೇವಲ ಮೂರು

(4) ಮೇಲಿನ ಎಲ್ಲವೂ

SHIKARAT.COM

**51.** ಕರ್ನಾಟಕದವರು ಈ ಕೆಳಗಿನ ವ್ಯಕ್ತಿಗಳಲ್ಲಿ ಯಾರು?

A. ಭಾರತೀಯ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದರು.

B. ಪ್ರಸಿದ್ಧ ಬರಹಗಾರ ಮತ್ತು ಪತ್ರಕರ್ತ.

C. 1938ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮತ್ತು ನಂತರ ಬಿಹಾರದ ರಾಜ್ಯಪಾಲರಾದರು.

D. 'ಅಂತರಾತ್ಮನಿಗೆ' ಕೃತಿಯನ್ನು ರಚಿಸಿದವರು.

(1) ರಂಗನಾಥ ರಾಮನಾಥ ದಿವಾಕರ

(2) ತಗಡೂರು ರಾಮಚಂದ್ರರಾವ್

(3) ಮೊಹರೆ ಹನುಮಂತರಾಯ

(4) ನಿಟ್ಟೂರು ಶ್ರೀನಿವಾಸರಾವ್

**52.** ಭಾರತೀಯ ರಾಷ್ಟ್ರೀಯ ಚಳುವಳಿಯ ಉಲ್ಲೇಖದೊಂದಿಗೆ ಕರ್ನಾಟಕದಲ್ಲಿ ಈ ಕೆಳಗಿನವುಗಳನ್ನು ಪರಿಗಣಿಸಿ :

A. 1938 ರಲ್ಲಿ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ ಮೊದಲ ಅಧಿವೇಶನ ನಡೆಯಿತು.

B. ಟಿ. ಸಿದ್ಧಲಿಂಗಯ್ಯ ಅಧ್ಯಕ್ಷರಾಗಿದ್ದರು.

C. ಸುಮಾರು 1000 ಜನರು ಭಾಗವಹಿಸಿದ್ದರು.

D. ಧ್ವಜಾರೋಹಣ ಮಾಡಿದ ನಂತರ ಅವರನ್ನು ಬ್ರಿಟಿಷರು ಬಂಧಿಸಿದರು.

ಮೇಲಿನ ಎಷ್ಟು ಪ್ರತಿಪಾದನೆಗಳು ತಪ್ಪಾಗಿವೆ?

(1) ಕೇವಲ ಒಂದು

(2) ಕೇವಲ ಎರಡು

(3) ಕೇವಲ ಮೂರು

(4) ಮೇಲಿನ ಯಾವುದೂ ಅಲ್ಲ

**53.** ಕರ್ನಾಟಕದ ಆರಂಭಿಕ ಸ್ವಾತಂತ್ರ್ಯ ಹೋರಾಟವನ್ನು ಉಲ್ಲೇಖಿಸಿ, ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| | ನಾಯಕರು / ಜನರು | ಪ್ರದೇಶ |
|---|---|---|
| A. | ಬೇಡರು | ಹಾನಗಲ್ |
| B. | ವೆಂಕಟಪ್ಪ ನಾಯಕ | ಸುರಪುರ |
| C. | ಬಾಬಾ ಸಾಹೇಬ್ | ನರಗುಂದ |
| D. | ಮುಂಡರಗಿ ಭೀಮಾ ರಾವ್ | ಕೊಪ್ಪಳ |

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(1) ಕೇವಲ ಒಂದು

(2) ಕೇವಲ ಎರಡು

(3) ಕೇವಲ ಮೂರು

(4) ಮೇಲಿನ ಎಲ್ಲವೂ

**54.** "ಎಲ್ಲಾ ಭೂಮಿಯ ಮಾಲೀಕತ್ವ ಪಡೆಯಬೇಕೆಂಬ ರಾಜನ ಅಪೇಕ್ಷೆಯಿಂದ ಮುಘಲ್ ಸಾಮ್ರಾಜ್ಯವು ಬಿಕ್ಕಟ್ಟಿನ ಕಡೆಗೆ ಸಾಗುತ್ತಿದೆ" ಎಂದ ಯುರೋಪಿನ ಪ್ರಯಾಣಿಕ

(1) ಫ್ರಾನ್ಸಿಸ್ಕೋ ಪೇಲ್‌ಸಾರ್ಯೆರ್ಟ್

(2) ಸರ್ ಥಾಮಸ್ ರೋ

(3) ಫಾದರ್ ಮೊನ್‌ಸೆರತ್ತೆ

(4) ಫ್ರಾನ್ಸಿಸ್ಕೋ ಬರ್ನಿರ್

SHIKARAT.COM

**55.** ಸರ್ವೋಚ್ಚ ನ್ಯಾಯಾಲಯದ ಯಾವ ತೀರ್ಪು ತೃತೀಯ ಲಿಂಗಿಗಳನ್ನು 'ಮೂರನೆಯ ಸಮುದಾಯ'ವೆಂದು ಘೋಷಿಸಿದೆ ಮತ್ತು ತೃತೀಯ ಲಿಂಗಿಗಾಗಿ ಪ್ರತ್ಯೇಕ ಕಾಲಮ್‌ಅನ್ನು ಉದ್ಯೋಗ ಅರ್ಜಿಗಳು ಹೊಂದಿರುವಂತೆ ಆದೇಶಿಸಿದೆ?

(1) ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ *v.* ಭಾರತ ಒಕ್ಕೂಟ

(2) ಸುರೇಶ್ ಕುಮಾರ್ ಕೌಶಲ್ *v.* ನಾಜ್ ಫೌಂಡೇಶನ್

(3) ನವತೇಜ್ ಸಿಂಗ್ ಜೋಹರ್ ಮತ್ತು Ors *v.* ಭಾರತ ಒಕ್ಕೂಟ

(4) ನ್ಯಾಯಾಧೀಶ ಕೆ.ಎಸ್. ಪುಟ್ಟಸ್ವಾಮಿ (ನಿವೃತ್ತ) ಮತ್ತು Anr. *v.* ಭಾರತ ಒಕ್ಕೂಟ

**56.** ಇಳಿಕೆ ಕ್ರಮದಲ್ಲಿ (ಗರಿಷ್ಠದಿಂದ ಕನಿಷ್ಠದವರೆಗೆ ಕೋಟಿ ರೂ.ಗಳಲ್ಲಿ) ಭಾರತದ ಕೇಂದ್ರ ಬಜೆಟ್‌ಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ಹೊಂದಿಸಿ :

A. ರಾಜಸ್ವ ವೆಚ್ಚ

B. ಬಂಡವಾಳ ವೆಚ್ಚ

C. ರಾಜಸ್ವ ಸ್ವೀಕೃತಿಗಳು

D. ಬಂಡವಾಳ ಸ್ವೀಕೃತಿಗಳು

(1) A, C, D, B

(2) A, C, B, D

(3) C, A, D, B

(4) C, A, B, D

**57.** ಆರ್ಥಿಕ ವ್ಯವಸ್ಥೆಯ ಮೇಲೆ ವೆಚ್ಚ-ನೂಕು ಹಣದುಬ್ಬರ ಯಾವ ರೀತಿಯ ಪರಿಣಾಮ ಉಂಟುಮಾಡುತ್ತದೆ?

A. ನೈಜ ವೇತನಗಳು ಹೆಚ್ಚುತ್ತವೆ ಮತ್ತು ಗ್ರಾಹಕರ ಖರೀದಿ ಶಕ್ತಿಯು ಹೆಚ್ಚುತ್ತದೆ.

B. ಹಣ ಹೂಡಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದು.

C. ಹೆಚ್ಚಿನ ನಿರುದ್ಯೋಗ ಪ್ರಮಾಣವನ್ನುಂಟು ಮಾಡುತ್ತದೆ ಮತ್ತು ಗ್ರಾಹಕರು ವೆಚ್ಚ ಮಾಡುವುದನ್ನು ಕಡಿಮೆ ಮಾಡುತ್ತದೆ.

D. ಸರ್ಕಾರ ವೆಚ್ಚ ಮಾಡುವುದನ್ನು ಕಡಿಮೆ ಮಾಡುವುದು ಮತ್ತು ಹಣದುಬ್ಬರ ಒತ್ತಡಗಳನ್ನು ಕಡಿಮೆ ಮಾಡುವುದು.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ / ವೆ?

(1) 1 ಹೇಳಿಕೆ ಮಾತ್ರ ಸರಿಯಾಗಿದೆ

(2) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 3 ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಮೇಲಿನ ಯಾವುದೂ ಅಲ್ಲ

SHIKARAT.COM

**58.** M3 ಎಂಬುದನ್ನು ಹಣದ ಪೂರೈಕೆಯನ್ನು ಅಳತೆ ಮಾಡಲು ಬಹಳ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ಇದನ್ನು ಒಟ್ಟು ಹಣಕಾಸಿನ ಸಂಪನ್ಮೂಲಗಳು ಎಂಬುದಾಗಿಯೂ ಕರೆಯಲಾಗುತ್ತದೆ. M3 ಯು ಕೆಳಗಿನವುಗಳ ಮೊತ್ತವನ್ನು ನಿರ್ಧರಿಸುತ್ತದೆ :

A. ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳಲ್ಲಿರುವ ಉಳಿತಾಯ ಠೇವಣಿಗಳು.

B. ವಾಣಿಜ್ಯ ಬ್ಯಾಂಕುಗಳಲ್ಲಿರುವ ನಿವ್ವಳ ಅವಧಿಯ ಠೇವಣಿಗಳು.

C. ಅಂಚೆ ಕಚೇರಿ ಉಳಿತಾಯ ಸಂಘಟನೆಗಳಲ್ಲಿರುವ ಒಟ್ಟು ಠೇವಣಿಗಳು.

D. ಹಣ

E. ವಾಣಿಜ್ಯ ಬ್ಯಾಂಕುಗಳಲ್ಲಿರುವ ನಿವ್ವಳ ಬೇಡಿಕೆ ಠೇವಣಿಗಳು.

(1) B, D ಮತ್ತು E

(2) B, C ಮತ್ತು D

(3) A, B ಮತ್ತು C

(4) D ಮತ್ತು E

**59.** ಕೆಳಗಿನವುಗಳಲ್ಲಿ ಯಾವುವು ಸರಿಯಾಗಿ ಹೊಂದಾಣಿಕೆಯಾಗುತ್ತಿವೆ :

| | ***A*** | ***B*** |
|---|---|---|
| A. | ಹಣದ ಅಪಮೌಲ್ಯ | ವಿದೇಶಗಳಲ್ಲಿ ದೇಶಿ ವಸ್ತುಗಳ ರಫ್ತುಗಳ ಸ್ಪರ್ಧಾತ್ಮಕತೆಯನ್ನು ಸುಧಾರಿಸುವುದು |
| B. | ಸಾಲ ಮಾಪನ ಏಜೆನ್ಸಿಗಳು | ಭಾರತೀಯ ರಿಸರ್ವ್ ಬ್ಯಾಂಕ್ ನಿಯಂತ್ರಿಸುವುದು |
| C. | ಆರ್ಜಿಸುವ ಹೊಸ ತಂತ್ರಜ್ಞಾನ | ಬಂಡವಾಳ ವೆಚ್ಚ |

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತಿದೆ/ವೆ?

(1) ಒಂದು ಮಾತ್ರ

(2) ಎರಡು ಮಾತ್ರ

(3) ಎಲ್ಲಾ ಮೂರೂ

(4) ಮೇಲಿನ ಯಾವುದೂ ಅಲ್ಲ

**60.** ಕೆಳಗಿನವುಗಳಲ್ಲಿ ಯಾವುದು ಒಂದು ಹೆಚ್ಚು ಹಣದುಬ್ಬರವಾಗಿರುವುದು?

(1) ಆಯವ್ಯಯ ಕೊರತೆಗೆ ಹಣಕಾಸು ಒದಗಿಸಲು ಸಾರ್ವಜನಿಕರಿಂದ ಸಾಲ ಪಡೆಯುವುದು.

(2) ಸರ್ಕಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ವೆಚ್ಚದಲ್ಲಿನ ಹೆಚ್ಚಳ.

(3) ಹಣದ ಅಪಮೌಲ್ಯ.

(4) ಆಯವ್ಯಯ ಕೊರತೆಗೆ ಹಣಕಾಸು ಒದಗಿಸಲು ಹೊಸ ಹಣದ ಹೂಡಿಕೆ ಮಾಡುವುದು. (ಮುದ್ರಣ ಮಾಡುವುದು)

SHIKARAT.COM

**61.** ಸಂಕುಚನ ಹಣಕಾಸು ನೀತಿಯನ್ನು ಜಾರಿಗೆತರಲು, ಆರ್‌ಬಿಐ ಕೆಳಗಿನವುಗಳನ್ನು ಮಾಡುವಂತಿಲ್ಲ :

A. ಶಾಸನಬದ್ಧ ದ್ರವತ್ವ ಅನುಪಾತವನ್ನು ಹೆಚ್ಚಿಸುವುದು. (SLR)

B. ಮಾರ್ಜಿನಲ್ ಸ್ಟ್ಯಾಂಡಿಂಗ್ ಸೌಲಭ್ಯ ಪ್ರಮಾಣವನ್ನು ಕಡಿಮೆ ಮಾಡುವುದು.

C. ಬ್ಯಾಂಕ್ ದರ ಮತ್ತು ರೆಪೊ ದರವನ್ನು ಕಡಿಮೆ ಮಾಡುವುದು.

ಮೇಲಿನ ಎಷ್ಟು ಹೇಳಿಕೆಗಳು ಸರಿಯಾಗಿದೆ/ವೆ?

(1) A ಮತ್ತು B

(2) A ಮಾತ್ರ

(3) B ಮತು C

(4) A, B ಮತು C

**62.** ವಿಪತ್ತಿನಿಂದ ಚೇತರಿಸಿಕೊಳ್ಳುವ ಮೂಲ ಸೌಕರ್ಯ ಸಂಘಟನೆಯನ್ನು ನ್ಯೂಯಾರ್ಕ್‌ನಲ್ಲಿ 23 ಸೆಪ್ಟೆಂಬರ್, 2019 ರಂದು ಸಂಯುಕ್ತ ರಾಷ್ಟ್ರ ಹವಾಮಾನ ಕ್ರಿಯಾ ಶೃಂಗಸಭೆಯಲ್ಲಿ ಭಾರತದ ಸನ್ಮಾನ್ಯ ಪ್ರಧಾನಮಂತ್ರಿಯವರು ಪ್ರಾರಂಭಿಸಿದರು.

A. ಇದು ಕೇವಲ ರಾಷ್ಟ್ರೀಯ ಸರ್ಕಾರಗಳು ಹಾಗೂ ಯುಎನ್ ಏಜೆನ್ಸಿಗಳ ಜಾಗತಿಕ ಸಹಭಾಗಿತ್ವವಾಗಿದೆ.

B. ಮೂಲತಃ ಭಾರತದ ಮೇಲೆ ಕೇಂದ್ರೀಕರಿಸಿ ಅಭಿವೃದ್ಧಿಶೀಲ ದೇಶಗಳಲ್ಲಿ ವಿಪತ್ತಿನಿಂದ ಚೇತರಿಸಿಕೊಳ್ಳುವ ಮೂಲಸೌಕರ್ಯ ವನ್ನು ಮುಂದುವರೆಸಲು ನೆಟ್‌ವರ್ಕ್‌ಅನ್ನು ಅಭಿವೃದ್ಧಿ ಪಡಿಸ ಲಾಗುವುದು.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಮತ್ತು B ಎರಡೂ ಅಲ್ಲ

**63.** ವರ್ಲ್ಡ್‌ಪೇ ಎಫ್‌ಐಎಸ್ ಮಾಡಿದ ಜಾಗತಿಕ ಸಂದಾಯಗಳ ವರದಿಯ ಪ್ರಕಾರ, ಭಾರತ ಇ-ವಾಣಿಜ್ಯ ಮಾರುಕಟ್ಟೆಯನ್ನು ಪರಿಣಾಮ ಕಾರಿಯಾದ ಲಾಭಗಳನ್ನು ಗಳಿಸಲು ಮತ್ತು 2025ರ ವೇಳೆಗೆ ವಾರ್ಷಿಕವಾಗಿ ಶೇಕಡಾ 18ರಷ್ಟು ಹೆಚ್ಚಿಸಲು ಪ್ರಾಯೋಜಿಸಲಾಗಿದೆ.

ಭಾರತದಲ್ಲಿ ಇ-ವಾಣಿಜ್ಯ ಕೈಗಾರಿಕೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಹಣಕಾಸು ವರ್ಷ 22ರಲ್ಲಿ ಇ-ವಾಣಿಜ್ಯ ಸೂಚನೆ ಪರಿಮಾಣ ಬೆಳವಣಿಗೆಗೆ ಪ್ರಮುಖವಾಗಿ ಕಳೆದ ಎರಡು ವರ್ಷಗಳಲ್ಲಿ IIನೇ ಶ್ರೇಣಿ ಮತ್ತು IIIನೇ ಶ್ರೇಣಿಯ ನಗರಗಳಲ್ಲಿ ಗ್ರಾಹಕರು ಶ್ರಮಿಸಿದರು.

B. Iನೇ ಶ್ರೇಣಿಯ ನಗರಗಳಲ್ಲಿ, IIನೇ ಶ್ರೇಣಿ ಮತ್ತು IIIನೇ ಶ್ರೇಣಿಯ ನಗರಗಳಿಗೆ ಹೋಲಿಸಿದರೆ ಕೊಂಚಮಟ್ಟಿಗೆ ನಿಧಾನಗತಿಯ ಸೂಚನೆ ಪರಿಮಾಣ ಬೆಳವಣಿಗೆ ಆಗಿರುತ್ತದೆ.

C. ವಿಶ್ವದಲ್ಲಿ ಹಣಕಾಸಿನ ನೆರವು ಅನುಭೋಗ ಹೆಚ್ಚುವ ಸಂಭವವಿರುವ ಗ್ರಾಮೀಣ ಪ್ರದೇಶಗಳಲ್ಲಿ ಇ-ವಾಣಿಜ್ಯ ವ್ಯಾಪಿಸುವುದನ್ನು ಹೆಚ್ಚಿಸಲು ಸಹಾಯವಾಗುತ್ತದೆ.

(1) A ಮತ್ತು B ಮಾತ್ರ

(2) C ಮಾತ್ರ

(3) A, B ಮತ್ತು C

(4) ಮೇಲಿನ ಯಾವುದೂ ಅಲ್ಲ

SHIKARAT.COM

**64.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಭಾರತೀಯ ರಿಸರ್ವ್ ಬ್ಯಾಂಕ್ ಭಾರತದಲ್ಲಿ ಎಲ್ಲ ಎಟಿಎಂ ಗಳಿಗೂ ಸಂಪರ್ಕ ಕಲ್ಪಿಸಿರುತ್ತದೆ.

B. ಬಂಡವಾಳ ಸಮರ್ಪಕತೆ ಅನುಪಾತವನ್ನು ಪ್ರತಿಯೊಂದು ಬ್ಯಾಂಕ್ ನಿರ್ಧರಿಸತಕ್ಕದ್ದು ಮತ್ತು ಆರ್‌ಬಿಐ ಒದಗಿಸಿದ ಪರಿಮಿತಿಯಲ್ಲಿರಬೇಕು.

C. ಮಾನದಂಡ ಬಡ್ಡಿ ದರಗಳನ್ನು ಆರ್‌ಬಿಐನ ಹಣಕಾಸು ನೀತಿ ಸಮಿತಿಯು ನಿರ್ಧರಿಸುತ್ತದೆ.

(1) 1 ಹೇಳಿಕೆ ಮಾತ್ರ ಸರಿಯಾಗಿದೆ

(2) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 3 ಹೇಳಿಕೆಗಳೂ ಸರಿಯಾಗಿವೆ

(4) ಮೇಲಿನ ಯಾವುದೂ ಅಲ್ಲ

**65.** ಆರ್‌ಟಿಇ ಕೋಟಾದ ಬಗ್ಗೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಯಾವುದೇ ವಾರ್ಡಿನ ಮಿತಿಗಳೊಳಗೆ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಶಾಲೆಯಿದ್ದು 'ನೆರೆಹೊರೆಯ ಶಾಲೆಗಳು' ಎಂಬುದಾಗಿ ಮಾನ್ಯತೆ ಪಡೆದುಕೊಳ್ಳುವ ಖಾಸಗಿ ಶಾಲೆಗಳನ್ನು ಸ್ಥಳಾಂತರಿಸಲು ಆರ್‌ಟಿಇ ಅಧಿನಿಯಮದ ತಿದ್ದುಪಡಿಯನ್ನು ಮಾಡಲಾಗಿದೆ.

B. 2024-25 ನೇ ಶೈಕ್ಷಣಿಕ ವರ್ಷದಲ್ಲಿ, ಆರ್‌ಟಿಇ ಕೋಟಾ ಸೀಟುಗಳನ್ನು ಕೊಡಬಹುದಾದ ಒಂದೇ ಒಂದು ಖಾಸಗಿ ಶಾಲೆಯು ಬೆಂಗಳೂರಿನಲ್ಲಿ ಇರುವುದಿಲ್ಲ.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ/ವೆ?

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಅಥವಾ B ಯಾವುದೂ ಅಲ್ಲ

**66.** ಅವುಗಳು ಒಪ್ಪಿಸಿದ ವರದಿಗಳು / ಸೂಚ್ಯಾಂಕದೊಂದಿಗೆ ಕೆಳಗಿನ ಸಂಸ್ಥೆಗಳನ್ನು ಹೊಂದಿಸಿ :

| | ಸಂಸ್ಥೆಗಳು | ವರದಿಗಳು / ಸೂಚ್ಯಾಂಕ |
|---|---|---|
| A. | ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ | ಜಾಗತಿಕ ರಿಯಲ್ ಎಸ್ಟೇಟ್ ಪಾರದರ್ಶಕತೆ ಸೂಚ್ಯಾಂಕ |
| B. | ನೀತಿ ಆಯೋಗ | ಸಾಥ್-ಇ ವರದಿ ಶಾಲಾ ಶಿಕ್ಷಣದ ವ್ಯವಸ್ಥಿತ ಪರಿವರ್ತನೆ |
| C. | ಐಎಂಎಫ್ | ಜಾಗತಿಕ ವ್ಯಾಪಾರ ಹೊರನೋಟ ಮತ್ತು ಅಂಕಿ ಅಂಶಗಳು |
| D. | ವಿಶ್ವ ಬ್ಯಾಂಕ್ | ಜಾಗತಿಕ ಆರ್ಥಿಕ ಸಂಭಾವ್ಯತೆಗಳು |

ಮೇಲಿನ ಯಾವುದುವು ಸರಿಯಾಗಿ ಹೊಂದಾಣಿಕೆ ಯಾಗುತ್ತದೆ/ವೆ?

(1) A ಮಾತ್ರ

(2) A ಮತ್ತು C

(3) B ಮತ್ತು D

(4) B, C ಮತ್ತು D

SHIKAPAT.COM

**67.** ಆರ್ಥಿಕ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ (ಎಫ್‌ಆರ್‌ಬಿಎಂ) ಅಧಿನಿಯಮ, 2003ಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ / ಹೇಳಿಕೆಗಳು ಸರಿಯಾಗಿದೆ/ವೆ?

A. ದೀರ್ಘಾವಧಿ ಆರ್ಥಿಕ ನೀತಿ ವಿವರಪಟ್ಟಿ, ಸೂಕ್ಷ್ಮ ಅರ್ಥಶಾಸ್ತ್ರ ಚೌಕಟ್ಟು ವಿವರಪಟ್ಟಿ ಮತ್ತು ವಾರ್ಷಿಕವಾಗಿ ಸಂಸತ್ತಿನಲ್ಲಿನ ಕೇಂದ್ರ ಆಯವ್ಯಯ ದಸ್ತಾವೇಜುಗಳೊಂದಿಗೆ ಆರ್ಥಿಕ ನೀತಿ ನಿರ್ವಹಣಾ ವಿವರಪಟ್ಟಿಯನ್ನು ಕಡ್ಡಾಯವಾಗಿ ಸರ್ಕಾರವು ಮುಂದಿಡ ಬೇಕೆಂದು ಎಫ್‌ಆರ್‌ಬಿಎಂ ಅಧಿನಿಯಮದಲ್ಲಿ ತಿಳಿಸಿದೆ.

B. ಅದು ರಾಜಸ್ವ ಕೊರತೆ, ಆರ್ಥಿಕ ಕೊರತೆ, ತೆರಿಗೆ ಕಂದಾಯ ಮತ್ತು ಒಟ್ಟು ಬಾಕಿ ನಿಂತಿರುವ ಹೊಣೆಗಳನ್ನು ಪ್ರಸ್ತಾಪಿಸುವ ಎಫ್‌ಆರ್‌ಬಿಎಂ ಅಧಿನಿಯಮವನ್ನು ಮಧ್ಯಮಾವಧಿ ಆರ್ಥಿಕ ನೀತಿ ವಿವರಪಟ್ಟಿಯಲ್ಲಿ ಒಟ್ಟು ರಾಜ್ಯ ಸ್ವದೇಶಿ ಉತ್ಪನ್ನ (ಜಿಡಿಪಿ) ಯ ಶೇಕಡಾವಾರಾಗಿ ಯೋಜಿಸಲಾಗಿದೆ.

C. ಯಾವುದೇ ಸಂದರ್ಭಗಳ ಮೇರೆಗೆ ಆರ್ಥಿಕ ಕೊರತೆ ಮತ್ತು ರಾಜಸ್ವ ರೂಪಿಸಿದ ಗುರಿಗಳು ಹೆಚ್ಚಾಗುವಂತಿಲ್ಲ.

D. ಎಫ್‌ಆರ್‌ಬಿಎಂ ಅಧಿನಿಯಮದ ಅಧಿನಿಯಮಿತಿಯ ನಂತರ, ಸರ್ಕಾರವು ಇಂದಿನವರೆಗೆ ಎರಡುಬಾರಿ ಮಾತ್ರ ಗುರಿಗಳನ್ನು ಸಾಧಿಸಲಾಗಿದೆ.

(1) 1 ಹೇಳಿಕೆ ಮಾತ್ರ ಸರಿಯಾಗಿದೆ

(2) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 3 ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಮೇಲಿನ ಯಾವುದೂ ಅಲ್ಲ

**68.** ಭಾರತದ ಎಲೆಕ್ಟ್ರಾನಿಕ್ಸ್ ರಫ್ತಿಗೆ ಸಂಬಂಧಿಸಿ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಕರ್ನಾಟಕವು ಹಣಕಾಸು ವರ್ಷ 23 ರಲ್ಲಿ ಭಾರತದಲ್ಲೇ ಅತಿದೊಡ್ಡ ಎಲೆಕ್ಟ್ರಾನಿಕ್ಸ್ ಸರಕುಗಳ ನಿರ್ಯಾತಗಾರವಾಗಿದ್ದು, ಹಣಕಾಸು ವರ್ಷ 24ರಲ್ಲಿ ಭಾರತದಿಂದ ರಫ್ತಾದ ಎಲ್ಲ ಎಲೆಕ್ಟ್ರಾನಿಕ್ ಸರಕುಗಳ ಶೇ 30 ರಷ್ಟು ಲೆಕ್ಕ ಕೊಡಲಾಗಿದೆ.

B. ಭಾರತದ ಒಟ್ಟಾರೆ ರಫ್ತುಗಳಲ್ಲಿ ಎಲೆಕ್ಟ್ರಾನಿಕ್ ಸರಕುಗಳ ಪಾಲು ಇತ್ತೀಚಿನ ವರ್ಷಗಳಲ್ಲಿ ಎರಡರಷ್ಟಕ್ಕಿಂತ ಹೆಚ್ಚಾಗಿದೆ.

C. ಸ್ಮಾರ್ಟ್ ಫೋನ್‌ಗಳ ರಫ್ತುಗಳ ಇಂದಿನ ಸ್ಥಿತಿಗಳು ಭಾರತದ ಎಲೆಕ್ಟ್ರಾನಿಕ್ ರಫ್ತುಗಳ ಶೇ 40ಕ್ಕೆ ಸಮೀಪವಾಗಿದೆ.

D. ಯು.ಎಸ್.ಎ. ಮತ್ತು ಚೀನಾ ದೇಶಗಳು ಭಾರತದ ಎಲೆಕ್ಟ್ರಾನಿಕ್ ಸರಕುಗಳ ರಫ್ತುಗಳಿಗಾಗಿ ಅತಿದೊಡ್ಡ ಮಾರುಕಟ್ಟೆಗಳಾಗಿವೆ.

E. ಕಳೆದ ಎರಡು ಹಣಕಾಸು ವರ್ಷಗಳಲ್ಲಿ, ಭಾರತದಲ್ಲಿ ಸ್ಮಾರ್ಟ್‌ಫೋನ್‌ಗಳ ರಫ್ತುಗಳು ಶೇ 40 ಕ್ಕೆ ಸಮೀಪವಾಗಿದ್ದು ಕಾಂಚಿಪುರಮ್, ತಮಿಳುನಾಡಿನಿಂದ (ಹೊರಗೆ) ಕಳುಹಿಸಲ್ಪಟ್ಟಿರುವುವು

ಮೇಲಿನ ಯಾವ ಹೇಳಿಕೆಗಳು ಸರಿಯಾಗಿದೆ?

(1) A, B ಮತ್ತು D

(2) B ಮತ್ತು D

(3) A, C ಮತ್ತು E

(4) B, C ಮತ್ತು E

**69.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಸಾಫ್ಟ್‌ವೇರ್ (ತಂತ್ರಾಂಶ) ಮತ್ತು ವ್ಯಾಪಾರ ಸೇವೆಗಳೆರಡೂ ಸೇರಿ ಭಾರತದ ಒಟ್ಟು ಸೇವೆಗಳ ರಫ್ತುಗಳು ಶೇ 60 ಕ್ಕಿಂತ ಹೆಚ್ಚಾಗಿವೆ.

B. ರಾಷ್ಟ್ರೀಯ ನಾಣ್ಯೀಕರಣ ವಿಧಾನ (ಎನ್‌ಎಂಪಿ)ವು 'ನಾಣ್ಯೀಕರಣದ ಮೂಲಕ ಆಸ್ತಿ ನಿರ್ಮಾಣ' ಎಂಬ ತತ್ವನೀತಿಯ ಮೇಲೆ ಆಧಾರವಾಗಿದೆ.

C. ಬಿಐಎಸ್ ತ್ರೈಮಾಸಿಕ ಸೆಂಟ್ರಲ್ ಬ್ಯಾಂಕ್ ಸರ್ವೆ 2022 ರ ಪ್ರಕಾರ, ಐಎನ್‌ಆರ್ ವಿಶ್ವ ವಿದೇಶಿ ವಿನಿಮಯ ವ್ಯವಹಾರಸ್ಥರ ಸಂಘದ ವಹಿವಾಟಿನಿಂದ ಬಂದ ಹಣದ ಶೇ 2 ಕ್ಕಿಂತ ಹೆಚ್ಚಾಗಿ ಲೆಕ್ಕ ಕೊಡಲಾಗಿದೆ.

(1) 1 ಹೇಳಿಕೆ ಮಾತ್ರ ತಪ್ಪಾಗಿದೆ

(2) 2 ಹೇಳಿಕೆಗಳು ಮಾತ್ರ ತಪ್ಪಾಗಿವೆ

(3) ಎಲ್ಲ 3 ಹೇಳಿಕೆಗಳೂ ತಪ್ಪಾಗಿವೆ

(4) ಎಲ್ಲ ಹೇಳಿಕೆಗಳೂ ಸರಿಯಾಗಿವೆ

**70.** ಅರೆವಾಹಕ ಕೈಗಾರಿಕೆಯಲ್ಲಿ ಫ್ಯಾಬ್ಲೆಸ್ ತಯಾರಿಕೆಯ ಮುಖ್ಯ ಲಕ್ಷಣವೇನು?

A. ಇದಕ್ಕೆ ಕಂಪನಿಗಳು ಸ್ವತಃ ಮತ್ತು ತಮ್ಮ ಸ್ವಂತ ಅರೆವಾಹಕ ತಯಾರಿಕೆ ಸ್ಥಿರ ಯಂತ್ರಗಳು ಕಾರ್ಯನಿರ್ವಹಿಸಲು ಒಳಪಡಿಸಿರುತ್ತವೆ.

B. ಇದಕ್ಕೆ ಒಬ್ಬ ಮೂರನೇ ವ್ಯಕ್ತಿ ಎರಕದ ಕೆಲಸಕ್ಕೆ ಹೊರಮೂಲ ಹಾರ್ಡ್‌ವೇರ್ (ಯಂತ್ರಾಂಶ) ತಯಾರಿಸುವಾಗ ಅರೆವಾಹಕಗಳಲ್ಲಿ ಹೊಂದಿಸಿ ಮಾರಾಟ ಮಾಡುವರು.

C. ಇದು ಅರೆವಾಹಕ ಸಾಮಗ್ರಿಗಳು ಮತ್ತು ಘಟಕಗಳ ಆಂತರಿಕ ಉತ್ಪಾದನೆಯ ಮೇಲೆ ಕೇಂದ್ರೀಕೃತವಾಗಿದೆ.

D. ಅರೆವಾಹಕ ಉತ್ಪಾದನೆಯಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ನ ಅನುಕಲನವನ್ನು ಇದು ಒಳಗೊಂಡಿರುತ್ತದೆ.

ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(1) A ಮತ್ತು D

(2) B ಮಾತ್ರ

(3) B ಮತ್ತು C

(4) A, C ಮತ್ತು D

SHIKARAT.COM

**71.** ಸಂವಿಧಾನ (86ನೇ ತಿದ್ದುಪಡಿ) ಅಧಿನಿಯಮ, 2002ಕ್ಕೆ ಸಂಬಂಧಿಸಿದಂತೆ ಯಾವ ಹೇಳಿಕೆಗಳು ಸರಿಯಾಗಿವೆ?

A. ಇದು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮೂಲಭೂತ ಹಕ್ಕನ್ನು ಒದಗಿಸಿದೆ.

B. ಸಂವಿಧಾನದ ಅನುಚ್ಛೇದ 21ಎ ಅನ್ನು ಈ ಅಧಿನಿಯಮದ ಮೇರೆಗೆ ಜಾರಿಗೆ ತರಲಾಗಿದೆ.

C. ಇದನ್ನು ಸಂವಿಧಾನದ ಅನುಚ್ಛೇದ 45ಎ ಯ ಬದಲಾಗಿ ಸೇರಿಸಲಾಗಿದೆ.

D. ಅನುಚ್ಛೇದ 51ಎ ರಲ್ಲಿ, ಹೊಸ ಖಂಡ(ಜೆ)ಯನ್ನು ಈ ಅಧಿನಿಯಮದ ಮೇರೆಗೆ ಸೇರಿಸಲಾಗಿದೆ.

ಸರಿ ಉತ್ತರವನ್ನು ಆಯ್ಕೆಮಾಡಿ :

(1) A, B, C ಮಾತ್ರ

(2) A, B ಮತ್ತು D ಮಾತ್ರ

(3) A ಮತ್ತು B ಮಾತ್ರ

(4) A, C ಮತ್ತು D ಮಾತ್ರ

**72.** ಕಾಲಾನುಕ್ರಮ (ಅನುಕ್ರಮವಾಗಿ) ಕೆಳಗಿನ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಹೊಂದಿಸಿ :

A. ನ್ಯಾಯಾಧೀಶ ಪಿ. ವಿ. ರೆಡ್ಡಿ

B. ನ್ಯಾಯಾಧೀಶ ಎಸ್. ಬಿ. ಮಜುಂದಾರ್

C. ನ್ಯಾಯಾಧೀಶ ಆರ್. ಪಿ. ಸೇಥಿ

D. ನ್ಯಾಯಾಧೀಶ ವೈ. ಭಾಸ್ಕರ್ ರಾವ್

(1) A, B, D, C

(2) D, C, A, B

(3) C, A, B, D

(4) B, C, D, A

**73.** ಯಾವ ದೇಶದಿಂದ ಭಾರತ ಸಂವಿದಾನವು ರಾಜ್ಯ ವಿಧಾನಮಂಡಲಗಳಿಂದ ಪ್ರಮಾಣಾನುಸಾರ ಪ್ರಾತಿನಿಧ್ಯದ ಆಧಾರದ ಮೇಲೆ ರಾಜ್ಯ ಸಭೆಯ ಸದಸ್ಯರುಗಳ ಚುನಾವಣಾ ಪ್ರಕ್ರಿಯೆಯನ್ನು ಅಳವಡಿಸಿ ಕೊಳ್ಳಲಾಗಿದೆ?

(1) ಆಸ್ಟ್ರೇಲಿಯಾ

(2) ದಕ್ಷಿಣ ಆಫ್ರಿಕಾ

(3) ಕೆನಡ

(4) ಜರ್ಮನಿ

**74.** ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

(1) ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಉದ್ಘೋಷಣೆಯನ್ನು, ಅದನ್ನು ಪ್ರಕಟಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಸಂಸತ್ತಿನ ಎರಡೂ ಸದನಗಳಿಂದ ಅನುಮೋದಿತವಾಗಬೇಕು.

(2) ರಾಜ್ಯ ತುರ್ತು ಪರಿಸ್ಥಿತಿಯ ಉದ್ಘೋಷಣೆಯನ್ನು, ಅದನ್ನು ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಸಂಸತ್ತಿನ ಎರಡೂ ಸದನಗಳು ಅನುಮೋದಿಸಿರಬೇಕು.

(3) ಆರ್ಥಿಕ ತುರ್ತು ಪರಿಸ್ಥಿತಿಯ ಉದ್ಘೋಷಣೆಯನ್ನು, ಅದನ್ನು ಪ್ರಕಟಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಸಂಸತ್ತಿನ ಎರಡೂ ಸದನಗಳು ಅನುಮೋದಿಸಿರಬೇಕು.

(4) ರಾಷ್ಟ್ರಪತಿಯವರ ಮಹಾಭಿಯೋಗ ನಿರ್ಣಯವನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಹಾಜರಿರುವ ಸದಸ್ಯರುಗಳ ಮೂರನೇ ಎರಡರಷ್ಟು ಬಹುಮತದ ಮೂಲಕ ಹೊರಡಿಸಲಾಗುತ್ತದೆ.

SHIKARAT.COM

**75.** 106ನೇ (ನೂರ ಆರನೆಯ) ಸಂವಿಧಾನ ತಿದ್ದುಪಡಿ ಅಧಿನಿಯಮಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಇದು ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಯಲ್ಲಿ ಮಹಿಳೆಯರ ಸ್ಥಾನಗಳ ಮೀಸಲಾತಿಗಾಗಿ ಅವಕಾಶ ಕಲ್ಪಿಸುತ್ತದೆ.

B. ಇದು ದೆಹಲಿಯ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದ ವಿಧಾನ ಸಭೆಯಲ್ಲಿ ಮಹಿಳೆಯರ ಸ್ಥಾನಗಳ ಮೀಸಲಾತಿಗಾಗಿ ಸಹ ಅವಕಾಶ ಕಲ್ಪಿಸುತ್ತದೆ.

C. ಈ ತಿದ್ದುಪಡಿಯ ನಂತರ ಮೊದಲನೆ ಜನಗಣತಿಯ ಆಧಾರದ ಮೇಲೆ ಮಾಡಲಾದ ಕ್ಷೇತ್ರ ಪುನರ್ವಿಂಗಡನಾ ನಿರ್ವಹಣೆಯ ನಿಕಟ ತರುವಾಯ ಮೀಸಲಾತಿಯು ಜಾರಿಗೆ ಬರುತ್ತದೆ.

D. ಈ ಮೀಸಲಾತಿಯು ಪ್ರಾರಂಭವಾದ ದಿನಾಂಕದಿಂದ 15 ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

(2) 3 ಹೇಳಿಕೆಗಳು ಮಾತ್ರ, ಸರಿಯಾಗಿವೆ

(3) 2 ಹೇಳಿಕೆಗಳು ಮಾತ್ರ, ಸರಿಯಾಗಿವೆ

(4) ಒಂದು ಹೇಳಿಕೆ ಮಾತ್ರ ಸರಿ

**76.** ಭಾರತದ ಲೆಕ್ಕನಿಯಂತ್ರಕ–ಹಾಗೂ ಮಹಾಲೆಕ್ಕ ಪರಿಶೋಧಕರಿಗೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ವೆ?

A. ಆತನ/ಆಕೆಯ ಪದಾವಧಿಯು 6 ವರ್ಷಗಳು ಅಥವಾ 65 ವರ್ಷ ವಯಸ್ಸಿನವರೆಗೆ, ಇವುಗಳಲ್ಲಿ ಯಾವುದು ಮುಂಚಿತವಾದ ಅವಧಿಯೋ, ಅಲ್ಲಿಯವರೆಗೆ ಇರುತ್ತದೆ.

B. ಆತನು/ಆಕೆಯನ್ನು ರಾಷ್ಟ್ರಪತಿಯವರು ನೇಮಕಮಾಡುವುದರಿಂದ, ಭಾರತದ ರಾಷ್ಟ್ರಪತಿಯವರ ಇಷ್ಟಪರ್ಯಂತದ ವರೆಗೆ ಆತನು/ಆಕೆಯು ಪದದಲ್ಲಿರುತ್ತಾನೆ.

C. ಆತನ/ಆಕೆಯ ಸಂಬಳ ಮತ್ತು ಸೇವಾ ಷರತ್ತುಗಳು ಶಾಸನಬದ್ಧ ವಾಗಿರತಕ್ಕದ್ದು.

D. ಆತನು, ಭಾರತದ ಸಂಚಿತ ನಿಧಿ, ಭಾರತದ ಸಾದಿಲ್ವಾರು ನಿಧಿ ಮತ್ತು ಸರ್ಕಾರಿ ಕಂಪನಿಗಳಿಂದಲೂ ಸಹ ಆದ ಎಲ್ಲಾ ವೆಚ್ಚಗಳ ಬಗ್ಗೆ ಲೆಕ್ಕ ಪರಿಶೋಧನೆಯನ್ನು ಮಾಡುತ್ತಾನೆ ಮತ್ತು ವರದಿಸಲ್ಲಿಸುತ್ತಾನೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲಾ ಹೇಳಿಕೆಗಳೂ ತಪ್ಪಾಗಿವೆ

(2) 3 ಹೇಳಿಕೆಗಳು ಮಾತ್ರ, ತಪ್ಪಾಗಿವೆ

(3) 2 ಹೇಳಿಕೆಗಳು ಮಾತ್ರ, ತಪ್ಪಾಗಿವೆ

(4) ಒಂದು ಹೇಳಿಕೆ ಮಾತ್ರ, ತಪ್ಪಾಗಿವೆ



SHIKAPAT.COM

**77.** ಈ ಕೆಳಗಿನ ಯಾವ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವೇಶ್ಯಾವಾಟಿಕೆಯನ್ನು ಒಂದು ವೃತ್ತಿ ಎಂದು ಮಾನ್ಯತೆಗೊಳಿಸಿದೆ?

(1) ಲಕ್ಷ್ಮಿಬಾಯಿ ಚಂದರಗಿ ವಿರುದ್ಧ ಕರ್ನಾಟಕ ರಾಜ್ಯ

(2) ದೇವಿಲಾಲ್ ವಿರುದ್ಧ ಮಧ್ಯ ಪ್ರದೇಶ ರಾಜ್ಯ

(3) ಸತ್ಬೀರ್ ಸಿಂಗ್ ವಿರುದ್ಧ ಹರಿಯಾಣ ರಾಜ್ಯ

(4) ಬುಧದೇವ ಕರ್ಮಾಸ್ಕರ್ ವಿರುದ ಪಶ್ಚಿಮ ಬಂಗಾಳ ರಾಜ್ಯ

**78.** ರಾಜ್ಯಾಂಗ ರಚನಾ ಸಭೆಯ ಈ ಕೆಳಗಿನ ಯಾವ ಸಮಿತಿಗಳಿಗಾಗಿ, ಡಾ. ರಾಜೇಂದ್ರ ಪ್ರಸಾದ್‌ರವರು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು?

A. ಪ್ರಕ್ರಿಯಾ ನಿಯಮಗಳ ಸಮಿತಿ

B. ಚಾಲನಾ ಸಮಿತಿ

C. ಹಣಕಾಸು ಮತ್ತು ಸಿಬ್ಬಂದಿ ಸಮಿತಿ

D. ರಾಷ್ಟ್ರಧ್ವಜ ಕುರಿತ

E. ವ್ಯವಹಾರ ಆದೇಶ ಸಮಿತಿ

ಈ ಕೆಳಗೆ ನೀಡಲಾದ ಆಯ್ಕೆಯಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲವೂ ಸರಿಯಾಗಿವೆ

(2) A, B, C ಮತ್ತು D ಸರಿಯಾಗಿವೆ

(3) A, B ಮತ್ತು C ಸರಿಯಾಗಿವೆ

(4) A, B, C ಮತ್ತು E ಸರಿಯಾಗಿವೆ

**79.** ಒಟ್ಟು 100 ಸ್ಥಾನವನ್ನು ಹೊಂದಿರುವ ಒಂದು ರಾಜ್ಯಸಭೆಯ ಸವಿವರವಾದ ವರ್ಣನೆಯನ್ನು ಪರಿಗಣಿಸಿ :

**ರಾಜ್ಯಸಭೆಯ ಸಾರ್ವತ್ರಿಕ ಚುನಾವಣೆಯ ವರ್ಷ**

* 2016

** 2021

**A ರಾಜಕೀಯ ಪಕ್ಷದ ಕಾರ್ಯಸಾಧನೆ**

* 15 ಸ್ಥಾನಗಳನ್ನು ಜಯಗಳಿಸಿದ್ದು ಚಲಾಯಸಿದ ಒಟ್ಟು ಸಿಂಧುವಾದ ಮತಗಳಲ್ಲಿ ಶೇ. 8 ರಷ್ಟನ್ನುಪಡೆದಿದೆ.

** 4 ಸ್ಥಾನಗಳನ್ನು ಜಯಗಳಿಸಿದೆ

**B ರಾಜಕೀಯ ಪಕ್ಷದ ಕಾರ್ಯ ಸಾಧನೆ**

* 3 ಸ್ಥಾನಗಳನ್ನು ಜಯಗಳಿಸಿದ್ದು, ಚಲಾಯಿಸಿದ ಒಟ್ಟು ಸಿಂಧುವಾದ ಮತಗಳಲ್ಲಿ ಶೇ. 5 ರಷ್ಟನ್ನು ಪಡೆದಿದೆ.

** 2 ಸ್ಥಾನಗಳನ್ನು ಜಯಗಳಿಸಿದೆ.

ರಾಜಕೀಯ ಪಕ್ಷಗಳ ಮಾನ್ಯತೆಗೆ ಸಂಬಂಧಿಸಿದಂತೆ, ಲಭ್ಯವಿರುವ ಮಾರ್ಗಸೂಚಿಗಳ ಅನುಸಾರ, ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) 2016ರಲ್ಲಿ, ಎರಡೂ ರಾಜಕೀಯ ಪಕ್ಷಗಳು ರಾಜ್ಯ ಮಾನ್ಯತೆ ಪಡೆದ ಪಕ್ಷಗಳಾಗುತ್ತವೆ ಮತ್ತು ಅವು 2021 ರಲ್ಲಿಯೂ ಸಹ, ಮಾನ್ಯತೆ ಪಡೆದ ಪಕ್ಷಗಳಾಗಿ ಮುಂದುವರಿಯುತ್ತವೆ.

(2) 2016ರಲ್ಲಿ, ಎರಡೂ ರಾಜಕೀಯ ಪಕ್ಷಗಳು ರಾಜ್ಯಮಾನ್ಯತೆ ಪಡೆದ ಪಕ್ಷಗಳಾಗುತ್ತವೆ ಮತ್ತು 2021ರಲ್ಲಿ ಎರಡೂ ಅದರ ಮಾನ್ಯತೆಯನ್ನು ಕಳೆದುಕೊಳ್ಳುತ್ತವೆ.

(3) 2016ರಲ್ಲಿ, A ಪಕ್ಷ ಮಾತ್ರ ಮಾನ್ಯತೆ ಪಡೆದ ಪಕ್ಷವಾಗುತ್ತದೆ ಮತ್ತು 2021ರಲ್ಲಿಯೂ ಸಹ, ಅದು ರಾಜ್ಯ ಪಕ್ಷವೆಂಬ ಅದರ ಮಾನ್ಯತೆಯನ್ನು ಮುಂದುವರಿಸುತ್ತದೆ.

(4) 2016ರಲ್ಲಿ ಎರಡೂ ರಾಜಕೀಯ ಪಕ್ಷಗಳು ರಾಜ್ಯ ಮಾನ್ಯತೆ ಪಡೆದ ಪಕ್ಷಗಳಾಗುತ್ತವೆ ಅದರೆ, 2021ರಲ್ಲಿ, A ಪಕ್ಷ ಮಾತ್ರ, ರಾಜ್ಯ ಪಕ್ಷವೆಂಬ ಅದರ ಮಾನ್ಯತೆಯನ್ನು ಮುಂದುವರಿಸುತ್ತದೆ. ಇದಕ್ಕೆ ಪ್ರತಿಯಾಗಿ, B ಪಕ್ಷವು, 2021 ರಲ್ಲಿ ಅದರ ಮಾನ್ಯತೆಯನ್ನು ಕಳೆದುಕೊಳ್ಳುತ್ತದೆ.

SHIKARAT.COM

80. ಖಾಯಂ ಲೋಕ್ ಅದಾಲತ್‌ಗೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ?

A. ಲೋಕ್ ಅದಾಲತ್ ಅಧಿನಿಯಮ, 2022ರ ನಂತರ, ಖಾಯಂ ಲೋಕ್ ಅದಾಲತ್ ಸ್ಥಾಪಿಸಲಾಯಿತು.

B. ಇದು ಮುಖ್ಯವಾಗಿ, ಪಕ್ಷಕಾರರ ನಡುವೆ ಮುಖ್ಯವಾಗಿ ರಾಜಿ ಅಥವಾ ಇತ್ಯರ್ಥವನ್ನು ಮಾಡುವ ಪರ್ಯಾಯ ವಿವಾದ ಪರಿಹಾರ ಕಾರ್ಯವ್ಯವಸ್ಥೆಯ ಮೇಲೆ ಆಧಾರಿತವಾಗಿದೆ.

C. ಇದು, ಅಪರಾಧಕ್ಕೆ ಅಷ್ಟೇ ಅಲ್ಲದೆ, ರಾಜಿ ಮಾಡಿಕೊಳ್ಳಬಹುದಾದ ಅಪರಾಧಕ್ಕೂ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ.

D. ಸಾರ್ವಜನಿಕ ಉಪಯುಕ್ತತಾ ಸೇವೆಗಳನ್ನು ಲೋಕ್ ಅದಾಲತ್‌ನ ವ್ಯಾಪ್ತಿಯ ಹೊರಗೆ ಇಡಲಾಗಿದೆ.

ಈ ಕೆಳಗೆ ನೀಡಲಾದ ಆಯ್ಕೆಯಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

(2) 3 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಒಂದು ಹೇಳಿಕೆ ಮಾತ್ರ ಸರಿ

81. ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಸಂವಿಧಾನದ ಭಾಗ-VII, ಭಾರತದಲ್ಲಿರುವ ಒಕ್ಕೂಟ ರಾಜ್ಯಕ್ಷೇತ್ರಗಳ ಬಗ್ಗೆ ವ್ಯವಹರಿಸುತ್ತದೆ.

B. ಭಾರತದ ರಾಷ್ಟ್ರಪತಿಯವರ ಏಜೆಂಟನಾಗಿ ಒಕ್ಕೂಟ ರಾಜ್ಯ ಕ್ಷೇತ್ರಗಳ ಆಡಳಿತಗಾರನಾಗಿ ಕಾರ್ಯ ನಿರ್ವಹಿಸುತ್ತಾರೆ.

C. ನ್ಯಾಯಾಂಗಕ್ಕೆ ಸಂಬಂಧಿಸಿದಂತೆ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮದರಾಸ್ ಉಚ್ಚ ನ್ಯಾಯಾಲಯದ ಅಡಿಯಲ್ಲಿ ಬರುತ್ತವೆ.

D. ಪಂಜಾಬ್ ರಾಜ್ಯಪಾಲರು ಚಂಡೀಗಢ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತ ಗಾರನಾಗಿ ಕಾರ್ಯ ನಿರ್ವಹಿಸುತ್ತಾರೆ.

ಈ ಕೆಳಗೆ ನೀಡಲಾದ ಆಯ್ಕೆಯಿಂದ ಸರಿಯಾದ ಉತ್ತವನ್ನು ಆರಿಸಿ :

(1) ಒಂದು ಹೇಳಿಕೆ ಮಾತ್ರ ಸರಿ

(2) 2 ಹೇಳಿಕೆಗಳು ಮಾತ್ರ ಸರಿಯಾಗಿವೆ

(3) 3 ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ಹೇಳಿಕೆಗಳೂ ಸರಿಯಾಗಿವೆ

SHIKARAT.COM

**82.** ಭಾರತದ ಸಂವಿಧಾನದ ಅನುಚ್ಛೇದ 12ರ ಪ್ರಕಾರ, 'ರಾಜ್ಯ' ಎಂಬ ಪದವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ :

A. ಭಾರತದ ಸರ್ಕಾರವನ್ನು ಮತ್ತು ಸಂಸತ್ತನ್ನು.

B. ರಾಜ್ಯದ ಸರ್ಕಾರವನ್ನು ಮತ್ತು ವಿಧಾನಮಂಡಲವನ್ನು.

C. ಭಾರತದ ರಾಜ್ಯಕ್ಷೇತ್ರದೊಳಗಿರುವ ಅಥವಾ ಹೊರಗಿನ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲ ಸ್ಥಳೀಯ ಅಥವಾ ಇತರ ಪ್ರಾಧಿಕಾರಗಳನ್ನು.

D. ಇದು ಶಾಸನಬದ್ಧ ಪ್ರಾಧಿಕಾರವನ್ನು ಒಳಗೊಳ್ಳುವುದಿಲ್ಲ.

ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ?

(1) A ಮತ್ತು B

(2) C ಮತ್ತು D

(3) A ಮತ್ತು D

(4) B ಮತ್ತು C

**83.** ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ವೆ?

A. ಅನಿವಾಸಿ ಭಾರತೀಯ (ಎನ್‌ಆರ್‌ಐ) ಎಂದರೆ, ಭಾರತದ ಹೊರಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಮತ್ತು ಭಾರತದ ಪಾಸ್‌ಪೋರ್ಟ್ ಅನ್ನು ಹೊಂದಿರುವ ಒಬ್ಬ ಭಾರತದ ನಾಗರಿಕ.

B. ಭಾರತೀಯ ಮೂಲದ ವ್ಯಕ್ತಿ (ಪಿಐಒ) ಎಂದರೆ, ಯಾರು ಅಥವಾ ಯಾರ ಪೂರ್ವಜರು ಭಾರತೀಯ ನಾಗರಿಕರಾಗಿರುವರೋ ಮತ್ತು ಯಾರು ಪ್ರಸ್ತುತ ಬೇರೊಂದು ದೇಶದ ರಾಷ್ಟ್ರೀಯತೆಯನ್ನು ಹೊಂದಿರುವರೋ ಹಾಗೂ ವಿದೇಶಿ ಪಾಸ್‌ಪೋರ್ಟ್ ಅನ್ನು ಹೊಂದಿರುವ ಒಬ್ಬ ವ್ಯಕ್ತಿ.

C. ಸಾಗರೋತ್ತರ ಭಾರತದ ನಾಗರಿಕ (ಒಸಿಐ) ಎಂದರೆ, ನಾಗರಿಕತ್ವ ಅಧಿನಿಯಮ, 1955ರ ಮೇರೆಗೆ ಒಸಿಐ ಕಾರ್ಡ್ ಹೊಂದಿರುವವನೆಂದು ನೋಂದಾಯಿತವಾದ ಒಬ್ಬ ವ್ಯಕ್ತಿ, ನಿವೃತ್ತ ಐಎಎಸ್ ಅಧಿಕಾರಿ ಮಹಮ್ಮದ್ ಸನಾವುಲ್ಲಾರವರು ಇದರ ಮುಖ್ಯಸ್ಥರಾಗಿರುವರು.

D. ಒಸಿಐ ಮತ್ತು ಎನ್‌ಆರ್‌ಐ ರು ಆಜೀವ ಪರ್ಯಂತದ ವರೆಗೆ ವೀಸಾ ಇಲ್ಲದೆ ಭಾರತಕ್ಕೆ ಭೇಟಿ ನೀಡಬಹುದು.

(1) ಒಂದು ಹೇಳಿಕೆ ಮಾತ್ರ ತಪ್ಪಾಗಿದೆ

(2) ಎರಡು ಹೇಳಿಕೆಗಳು ಮಾತ್ರ ತಪ್ಪಾಗಿವೆ

(3) ಮೂರು ಹೇಳಿಕೆಗಳು ಮಾತ್ರ ತಪ್ಪಾಗಿವೆ

(4) ಹೇಳಿಕೆಗಳು ಯಾವುದೂ ತಪ್ಪಾಗಿಲ್ಲ



SHIKARAT.COM

**84.** ಭಾರತ ಸರ್ಕಾರವು ಭಾರತ ಸಂವಿಧಾನದೊಳಕ್ಕೆ 'Yehzabo' ವನ್ನು ಸೇರಿಸಲು ಒಪ್ಪಿಕೊಂಡಿದೆ. 'Yehzabo' ಏನನ್ನು ಸೂಚಿಸುತ್ತದೆ?

(1) VIIIನೇ ಅನುಸೂಚಿಯಲ್ಲಿನ ಬುಡಕಟ್ಟು ಭಾಷೆ

(2) Vನೇ ಅನುಸೂಚಿಯ ಬುಡಕಟ್ಟು ಸಮುದಾಯ

(3) ನಾಗಾ ಸಂವಿಧಾನ

(4) ಪ್ರತ್ಯೇಕ ಸ್ವಾಯತ್ತ ಲಡಾಖ್ ಪ್ರದೇಶದ ರಚನೆ

**85.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. ಜನರಲ್ಲಿ ಕೋಮು ಸಾಮರಸ್ಯ ಮತ್ತು ಭ್ರಾತೃ ಭಾವನೆಯನ್ನು ಮೂಡಿಸಲು ವಿಭಜನೆಯ ನಂತರ ಕೋಮು ಸಾಮರಸ್ಯ ರಾಷ್ಟ್ರೀಯ ಪ್ರತಿಷ್ಠಾನವನ್ನು 1948ರಲ್ಲಿ ಸ್ಥಾಪಿಸಲಾಯಿತು.

B. ಇದು ಕೇಂದ್ರ ಗೃಹ ಸಚಿವರ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಒಂದು ಸ್ವಾಯತ್ತ ಸಂಸ್ಥೆಯಾಗಿದೆ.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ವೆ?

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) ಮೇಲಿನ ಯಾವುದೂ ಅಲ್ಲ

**86.** ಕೆಳಗಿನ ಯಾವುವು ಭಾರತದ ಚುನಾವಣಾ ಆಯೋಗದ ಕಾರ್ಯವಾಗಿದೆ/ಗಳಾಗಿವೆ?

A. ಲೋಕಸಭೆಗೆ ಚುನಾವಣೆಗಳನ್ನು ನಡೆಸುವುದು.

B. ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸುವುದು.

C. ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದು.

D. ಮತಕ್ಷೇತ್ರಗಳ ಪುನರ್ವಿಂಗಡನೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A, C ಮತ್ತು D

(2) B, C ಮತ್ತು D

(3) A, B, C ಮತ್ತು D

(4) A ಮತ್ತು B ಮಾತ್ರ

**87.** ಬಹು-ಕ್ಷೇತ್ರೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳಕೊಲ್ಲಿ ಉದ್ಯಮಶೀಲತೆ (BIMSTEC) ಕುರಿತ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

A. ಇದು ಏಳು ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.

B. ಇದು ಜಗತ್ತಿನ ಜನಸಂಖ್ಯೆಯ ಶೇ. 21 ರಷ್ಟು ಒಳಗೊಂಡಿದೆ.

C. ಇದು ಕಾರ್ಯತಂತ್ರ, ರಕ್ಷಣೆ ಮತ್ತು ಭದ್ರತಾ ಕ್ಷೇತ್ರಗಳಲ್ಲಿ ಸಹಕಾರವನ್ನು ಉತ್ತೇಜಿಸುತ್ತದೆ.

D. ಇದು ಢಾಕಾದಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿದೆ.

(1) A, B, C ಮತ್ತು D

(2) A, B ಮತ್ತು D

(3) A, B ಮತ್ತು C

(4) B, C ಮತ್ತು D

SHIKARAT.COM

**88.** ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ?

A. 'ಸರ್ಕಾರಿಯಾ ಆಯೋಗ'ವನ್ನು ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ಬದಲಾವಣೆಗಳನ್ನು ಪರಿಶೀಲಿಸಲು ಮತ್ತು ಅವುಗಳ ಬಗ್ಗೆ ಶಿಫಾರಸ್ಸು ಮಾಡಲು ನೇಮಕ ಮಾಡಲಾಯಿತು.

B. ಭಾರತ ಸಂವಿಧಾನದ ಅನುಚ್ಛೇದ 122 ರಾಷ್ಟ್ರಪತಿಯ ಮಹಾಭಿಯೋಗವನ್ನು ಕುರಿತದ್ದಾಗಿದೆ.

C. 'ವಿವಾಹ ವಿಚ್ಛೇದನ ಮತ್ತು ವಿವಾಹ' ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಮಾಡುವ ಅಧಿಕಾರವು ಪ್ರತ್ಯೇಕವಾಗಿ ಭಾರತದ ಸಂಸತ್ತಿಗೆ ಇರುತ್ತದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) B ಮಾತ್ರ

(2) A ಮತ್ತು B ಮಾತ್ರ

(3) A ಮತ್ತು C ಮಾತ್ರ

(4) C ಮಾತ್ರ

**89.** ಭಾರತದ ನೀರಿನ ಬಸಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

A. ಭಾರತದ ನೀರಿನ ಬಸಿತ ವ್ಯವಸ್ಥೆಯು ಮೂರು ಭೌತ ಭೂಗೋಳಕ ಘಟಕಗಳ ಹಾಗೂ ಪ್ರಕೃತಿಯ ಹಾಗೂ ಅವಕ್ಷೇಪಣದ ಲಕ್ಷಣಗಳ ವಿಕಾಸ ಪ್ರಕ್ರಿಯೆಯ ಫಲಿತಾಂಶವಾಗಿದೆ.

B. ಹಿಮಾಲಯದ ಪ್ರೋತ್ಥಾನ ಪೆನಿಸ್ಸುಲಾ ಭಾಗದ ಪೆನಿನ್ಸುಲರ್ ಬ್ಲಾಕ್‌ನ ಉತ್ತರ ಭಾಗವು ತಗ್ಗುವಿಕೆ ಮತ್ತು ತನ್ಮೂಲಕ ವಾದ ಟ್ರಫ್ ಫಾಲ್ಟಿಂಗ್ ಪ್ರಕ್ರಿಯೆಯಿಂದ ಹಿಮಾಲಯದ ಪ್ರೋತ್ಥಾನವಾಗಿದೆ.

C. ಪೆನಿನ್ಸುಲರ್ ಬ್ಲಾಕ್‌ನ ವಾಯುವ್ಯದಿಂದ ಆಗ್ನೇಯದ ಮಾರ್ಗದಲ್ಲಿ ಆಗುವ ಅಲ್ಪ ಬಾಗುವಿಕೆಯು, ಬಸಿತ ವ್ಯವಸ್ಥೆಯನ್ನು ಬಂಗಾಳ ಕೊಲ್ಲಿಯೆಡೆಗೆ ಅನುಸ್ಥಾಪನೆ ಗೊಳ್ಳುವಂತೆ ಮಾಡಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿ ಇವೆ?

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, B ಮತ್ತು C

SHIKARAT.COM

**90.** ಪಟ್ಟಿ—*I*ರ ಜೊತೆಗೆ ಪಟ್ಟಿ—*II*ಅನ್ನು ಹೊಂದಿಸಿ :

| ಪಟ್ಟಿ—*I* ನದಿಗಳ ಹೆಸರು | ಪಟ್ಟಿ—*II* ಅವುಗಳಿಂದ ಉಂಟಾಗಿರುವ ಜಲಪಾತ |
|---|---|
| A. ಲಕ್ಷ್ಮಣ ತೀರ್ಥ | *(i)* ಕುಂಚಿಕಲ್ |
| B. ಅಘನಾಶಿನಿ | *(ii)* ಉಂಚಳ್ಳಿ |
| C. ವಾರಾಹಿ | *(iii)* ಮಾಗೋಡು |
| D. ಬೇಡ್ತಿ | *(iv)* ಇರ್ಪು |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(iv)* | *(i)* | *(iii)* | *(ii)* |
| (2) | *(i)* | *(iii)* | *(iv)* | *(ii)* |
| (3) | *(iv)* | *(ii)* | *(i)* | *(iii)* |
| (4) | *(ii)* | *(iv)* | *(iii)* | *(i)* |

**91.** ಪಟ್ಟಿ—*I*ರ ಜೊತೆಗೆ ಪಟ್ಟಿ—*II*ಅನ್ನು ಹೊಂದಿಸಿ :

| ಪಟ್ಟಿ—*I* ನದಿಗಳ ಹೆಸರು | ಪಟ್ಟಿ—*II* ನದಿಗಳಿಂದ ರೂಪುಗೊಂಡ ಗಡಿಗಳನ್ನು ಹೊಂದಿರುವ ರಾಜ್ಯಗಳು |
|---|---|
| A. ವೇದಾವತಿ | *(i)* ತೆಲಂಗಾಣ ಮತ್ತು ಕರ್ನಾಟಕ |
| B. ಕಬಿನಿ/ಕಪಿಲಾ | *(ii)* ಕೇರಳ ಮತ್ತು ಕರ್ನಾಟಕ |
| C. ಕಾವೇರಿ | *(iii)* ಮಹಾರಾಷ್ಟ್ರ ಮತ್ತು ಕರ್ನಾಟಕ |
| D. ಭೀಮ | *(iv)* ತಮಿಳುನಾಡು ಮತ್ತು ಕರ್ನಾಟಕ |
| | *(v)* ಆಂಧ್ರಪ್ರದೇಶ ಮತ್ತು ಕರ್ನಾಟಕ |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | *(v)* | *(ii)* | *(iv)* | *(iii)* |
| (2) | *(ii)* | *(iii)* | *(iv)* | *(v)* |
| (3) | *(i)* | *(ii)* | *(iv)* | *(v)* |
| (4) | *(v)* | *(i)* | *(ii)* | *(iii)* |

**92.** ಭಾರತದಲ್ಲಿ ಕುಮ್ರಿ (Kumri) ವ್ಯವಸಾಯಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

A. ಇದು ಸ್ವಾತಂತ್ರ್ಯಕ್ಕೂ ಮೊದಲು ಕರ್ನಾಟಕದಲ್ಲಿ ಆಚರಣೆಯಲ್ಲಿದ್ದ ಪರ್ಯಾಯ ವ್ಯವಸಾಯದ ಒಂದು ರೂಪವಾಗಿದೆ.

B. ಇದನ್ನು 1890ರಲ್ಲಿ ಪ್ರತಿಬಂಧಿಸಲಾಯಿತು.

C. ಈಗ ಕರ್ನಾಟಕ ರಾಜ್ಯದ ಭಾಗಗಳಾಗಿರುವಂಥ ಮದರಾಸ್ ಪ್ರಾಂತವು ಆಡಳಿತ ನಡೆಸಿದ ಪ್ರದೇಶಗಳಿಗೆ ಸೀಮಿತವಾಗಿತ್ತು.

D. ಕುಮ್ರಿ ವ್ಯವಸ್ಥಾಯದಲ್ಲಿ ಮುಖ್ಯವಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ ಮತ್ತು ಬ್ರಿಟೀಷ್ ಆಡಳಿತಕ್ಕೆ ಕಚ್ಚಾ ಸಾಮಗ್ರಿಗಳನ್ನು ಪೂರೈಸಲಾಗುತ್ತದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ ಸರಿ

(2) A ಮತ್ತು C ಮಾತ್ರ ಸರಿ

(3) A, B ಮತ್ತು D ಮಾತ್ರ ಸರಿಯಾಗಿವೆ

(4) B ಮತ್ತು C ಮಾತ್ರ ಸರಿಯಾಗಿವೆ

93. ಪಟ್ಟಿ—Iನ್ನು ಪಟ್ಟಿ—II ರೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| ಪಟ್ಟಿ—I ಚರಂಡಿ ವ್ಯವಸ್ಥೆಯ ನಮೂನೆಗಳು | ಪಟ್ಟಿ—II ಭೌತಿಕ ಲಕ್ಷಣಗಳು |
|---|---|
| A. ಸಸ್ಯಾಂಕಿತ (Dendritic) | (i) ನರ್ಮದಾ ಮತ್ತು ತಾಪಿ ವ್ಯಾಲಿಗಳು |
| B. ತ್ರಿಜ್ಯ (Radial) | (ii) ಕೇಂದ್ರ ಎತ್ತರದ ನೆಲ |
| C. ಪಿನೇಟ್ | (iii) ಇಂಡೋ-ಗಂಗಾಟಿಕ್ ಪ್ಲೇನ್ಸ್ |
| D. ಜಾಲರಿ ಚೌಕಟ್ಟು ಕಟ್ಟು (Trellis) | (iv) ಪರ್ಯಾಯದ್ವೀಪ ಪ್ರದೇಶ |

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | (i) | (iii) | (iv) | (ii) |
| (2) | (ii) | (iv) | (i) | (iii) |
| (3) | (iii) | (ii) | (i) | (iv) |
| (4) | (i) | (iii) | (ii) | (iv) |

94. ಕೆಳಕಂಡ ಜನಾಂಗ ಗುಂಪನ್ನು ಅದರ ಸ್ಥಳ, ದೇಶಗಳೊಂದಿಗೆ ಹೊಂದಿಸಿರಿ :

| ಜನಾಂಗ ಗುಂಪು | | ದೇಶ |
|---|---|---|
| A. ಮಾಸಾಯಿ | — | ತಾಂಜಾನಿಯಾ, ಕೀನ್ಯಾ |
| B. ಸಾಮಿ | — | ಸ್ವೀಡನ್, ನಾರ್ವೆ |
| C. ಇಂಕಾ | — | ಪೆರು, ಬೊಲಿವಿಯಾ |
| D. ಚಿನ್ | — | ಮಯನ್‌ಮಾರ್, ಭಾರತ |

(1) A ಮತ್ತು D ಮಾತ್ರ
(2) A, B ಮತ್ತು D ಮಾತ್ರ
(3) A ಮತ್ತು C ಮಾತ್ರ
(4) A, B, C ಮತ್ತು D

95. ಕೆಳಕಂಡ ಯಾವ ಬೆಳೆ ಉತ್ಪನ್ನದೊಂದಿಗೆ ಮತ್ತು ದೇಶದ ಹೊಂದಿಕೆ ಸರಿಯಾಗಿಲ್ಲ?

A. ಕಡಲೆಕಾಯಿಯ ದೊಡ್ಡ ಉತ್ಪಾದಕ — ಚೀನಾ
B. ತೆಂಗಿನಕಾಯಿಯ ದೊಡ್ಡ ಉತ್ಪಾದಕ — ಇಂಡೋನೇಶಿಯಾ
C. ಹತ್ತಿಯ ದೊಡ್ಡ ಉತ್ಪಾದಕ — ಇಂಡಿಯಾ
D. ಮೆಕ್ಕೆಜೋಳದ ದೊಡ್ಡ ಉತ್ಪಾದಕ — ಯುಕ್ರೇನ್

(1) D ಮಾತ್ರ
(2) C ಮತ್ತು D ಮಾತ್ರ
(3) B, C ಮತ್ತು D ಮಾತ್ರ
(4) A, B, C ಮತ್ತು D

96. ಸೆರೆಂಗೇಟಿ ಮತ್ತು ಮಸಾಯಿ ಮಾರ ರಾಷ್ಟ್ರೀಯ ಉದ್ಯಾನಗಳ ನಡುವೆ ವಾರ್ಷಿಕ ಎರಡು ಮಿಲಿಯನ್ ಅಂಗ್ಯುಲೇಟ್ ಮತ್ತು ಕಾಡು ಪ್ರಾಣಿಗಳ ವಲಸೆ ಸಂಭವಿಸುತ್ತದೆ. ಈ ಉದ್ಯಾನಗಳು ಇರುವುದು.

(1) ರ್‍ವಾಂಡಾ ಮತ್ತು ಕಾಂಗೋ
(2) ತಾಂಜಾನಿಯಾ ಮತ್ತು ಕೀನ್ಯಾ
(3) ಇಥಿಯೋಪಿಯಾ ಮತ್ತು ಸೂಡಾನ್
(4) ಜೈರ್ ಮತ್ತು ದಕ್ಷಿಣ ಆಫ್ರಿಕಾ

SHIKARAT.COM

**97.** ಈ ಕೆಳಗಿನ ಯಾವ ದೇಶ ಮತ್ತು ನದಿಗಳು ಸರಿಯಾಗಿ ಹೊಂದುತ್ತವೆ?

| | ನದಿ | | ದೇಶ |
|---|---|---|---|
| A. | ಮಹಾವೇಲಿ ಗಂಗಾ (ಗ್ರೇಟ್ ಸ್ಯಾಂಡಿ ನದಿ) | — | ಥೈಲ್ಯಾಂಡ್ |
| B. | ಛಾವೊ ಪರಾಯಾ | — | ಮ್ಯಾನ್‌ಮಾರ್ |
| C. | ಇರ್ರಾವಡ್ಡಿ | — | ವಿಯೆಟ್ನಾಂ |
| D. | ಮೆಕಾಂಗ್ | — | ಶ್ರೀಲಂಕಾ |

(1) A ಮಾತ್ರ

(2) B ಮತ್ತು C ಮಾತ್ರ

(3) D ಮಾತ್ರ

(4) ಮೇಲಿನ ಯಾವುದೂ ಅಲ್ಲ

**98.** ಈ ಕೆಳಕಂಡ ಯಾವ ಹೇಳಿಕೆಗಳು Leveche ಮತ್ತು Gharbiಗೆ ಸಂಬಂಧಿಸಿದಂತೆ ಸರಿಯಲ್ಲ?

A. ಇದು ಉತ್ತರ-ದಕ್ಷಿಣ ದಿಕ್ಕಿನಲ್ಲಿ ರೋನ್ ಕಣಿವೆಯಿಂದ ತಂಪು ಮಾರುತ ತರುತ್ತದೆ.

B. ಇದು ಸಹರಾ ಮರಳುಗಾಡಿನಿಂದ ಮೆಡಿಟರೇನಿಯನ್ ಸಮುದ್ರದ ಕಡೆಗೆ ಒಣ ಧೂಳು ಮತ್ತು ಬಿಸಿ ಮಾರುತ ತರುತ್ತದೆ.

C. ಚಿಲಿ ಮತ್ತು ಸಿರೋಕೋ ಒಂದೇ ಬಗೆಯಾ ಮಾರುತವಾಗಿದೆ.

D. ಗ್ರಿಗೇಲ್ ಮತ್ತು ಬೋರಾ ಒಂದೇ ಬಗೆಯ ಮಾರುತದ ವಿಧವಾಗಿದೆ.

ಹೆಚ್ಚು ಸೂಕ್ತವಾದ ಆಯ್ಕೆಯನ್ನು ಗುರುತಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು D ಮಾತ್ರ

(4) B ಮತ್ತು C ಮಾತ್ರ

**99.** ಸುಡಾನ್ ವಿಧದ ಹವಾಮಾನ ವಲಯಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೇ ಸರಿ?

A. ಈ ಹವಾಮಾನ ವಲಯವು ಹತ್ತಿ, ಕಬ್ಬು, ಕಾಫಿ, ತಾಳೆ ಎಣ್ಣೆ, ಕಡಲೆಬೀಜ ಇತ್ಯಾದಿಗಳಿಗೆ ಹೆಚ್ಚು ವ್ಯಾಪಕ ಕೃಷಿ ಸಾಮರ್ಥ್ಯ ಹೊಂದಿದೆ.

B. ಹವಾಮಾನ ವಲಯವು ಋತುಕಾಲಿಕ ಬರಗಾಲ ಮತ್ತು ಪ್ರವಾಹವನ್ನು ಎದುರಿಸಿದೆ.

C. ಇದು 'ಬುಷ್ ವೆಲ್ಡ್', ನೊಂದಿಗೆ ಸಾಮಾನ್ಯ ಹಸು ದೇಶವಾಗಿದೆ.

D. ಹೌಸಾ ಬುಡಕಟ್ಟು ಬೌಚಿ ಪ್ರಸ್ಥಭೂಮಿಯಿಂದ ನೆಲೆಸಿರುವ ಕೃಷಿಕರಾಗಿದ್ದಾರೆ.

(1) A ಮಾತ್ರ

(2) B ಮತ್ತು C ಮಾತ್ರ

(3) A ಮತ್ತು D ಮಾತ್ರ

(4) A, B, C ಮತ್ತು D

**100.** ಈ ಕೆಳಕಂಡ ಯಾವ ಖನಿಜ ಮತ್ತು ಖನಿಜ ಉತ್ಪನ್ನಗಳ ದೇಶಗಳನ್ನು ಗರಿಷ್ಠ ಉತ್ಪಾದನೆಯ ನಿಬಂಧದಲ್ಲಿ ತಪ್ಪಾಗಿ ಜೋಡಿಸಲಾಗಿದೆ?

A. ನಿಕೆಲ್ : ಯುಎಸ್‌ಎ

B. ಬೆಳ್ಳಿ : ಮೆಕ್ಸಿಕೋ

C. ಚಿನ್ನ : ಚೀನಾ

D. ಕಬ್ಬಿಣದ ಅದಿರು : ಭಾರತ

ಹೆಚ್ಚು ಸೂಕ್ತವಾದ ಹೇಳಿಕೆಯನ್ನು ಆಯ್ಕೆಮಾಡಿ :

(1) A ಮಾತ್ರ

(2) A ಮತ್ತು B ಮಾತ್ರ

(3) A, B ಮತ್ತು C ಮಾತ್ರ

(4) A ಮತ್ತು D ಮಾತ್ರ

B
4

SHIKARAT.COM